ಕಿಡ್ನಿ ಮುಂತಾದ ಅಂಗಾಂಗಗಳ ಅಕ್ರಮ ಮಾರಾಟ ಜಾಲಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ, ಅನಾರೋಗ್ಯಪೀಡಿತರ ಬಾಳಿಗೆ ಬೆಳಕಾಗುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ 2017ರಲ್ಲಿ ಸ್ಥಾಪಿಸಿದ ಸಂಸ್ಥೆಯೇ ‘ಜೀವ ಸಾರ್ಥಕತೆ’. ಅಂಗಾಂಗ ದಾನ ವಿಚಾರದಲ್ಲಿ ಈ ಕೆಲವು ವರ್ಷಗಳಲ್ಲಿ ಜೀವ ಸಾರ್ಥಕತೆ ಮೂಡಿಸಿದ ಜಾಗೃತಿ ನಿಜಕ್ಕೂ ಅಭಿನಂದನಾರ್ಹ ವಿಚಾರ...



# ಅಂಗಾಂಗ ದಾನ


## ಜೀವ ಸಾರ್ಥಕತೆಯ ಸೋಪಾನ

### ಮಾನವೀಯ ಹೆಜ್ಜೆಗಳಿಗೆ ಸಿಎಂ ಬೊಮ್ಮಾಯಿ ಪ್ರೇರಣೆ



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ‘ಜೀವ ಸಾರ್ಥಕತೆ’ ಮುಂತಾದ ಪ್ರತಿಯೊಂದು ಹೆಜ್ಜೆಗಳಿಗೆ ಸದಾ ಪ್ರೋತ್ಸಾಹ ನೀಡುತ್ತಿರುವವರು, ಮಾನ್ಯ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು. ಅಂಗಾಂಗ ದಾನ ಸೇರಿದಂತೆ ಸಾರ್ವಜನಿಕ ಆರೋಗ್ಯದ ಹಿತ ದೃಷ್ಟಿಯಿಂದ, ಮಾನವೀಯ ನೆಲೆಗಟ್ಟಿನಲ್ಲಿ ಕೈಗೊಳ್ಳುವ ಎಲ್ಲ ಕಾರ್ಯಕ್ರಮಗಳಿಗೂ ಸಿಎಂ ಅವರ ಪ್ರೇರಣೆ ಕಾಣಬಹುದು.

GOVERNMENT OF KARNATAKA





**ಅಂ**ಗಾಂಗ ದಾನವೆಂದರೆ, 'ಬೇರೊಬ್ಬರ ಬಾಳಿನ ಕಾರ್ಮೋಡದಲ್ಲಿ ಕಾಮನಬಿಲ್ಲನ್ನು ಮೂಡಿಸುವ ಶ್ರೇಷ್ಠ ಕಾರ್ಯ'. ಆರೋಗ್ಯ ಇಲಾಖೆಯ 'ಜೀವ ಸಾರ್ಥಕತೆ' ಸಂಸ್ಥೆ ಮಾಡುವ ಮಹದುಪಕಾರವೂ ಇದೇ ಆಗಿದೆ. ದಾನಿಗಳಿಂದ ಅಂಗಾಂಗಗಳನ್ನು ಸಂಗ್ರಹಿಸಿ, ಅತ್ಯಗತ್ಯವುಳ್ಳವರಿಗೆ ಅದನ್ನು ತಲುಪಿಸಿ, ಜೀವ ಉಳಿಸುವ ಪುಣ್ಯದ ಕೆಲಸವನ್ನು 'ಜೀವ ಸಾರ್ಥಕತೆ' ತಪಸ್ಸಿನಂತೆ ನಡೆಸಿಕೊಂಡು ಬರುತ್ತಿದೆ.

'ಕನ್ಯಾದಾನವೇ ಶ್ರೇಷ್ಠ ದಾನ' ಎಂಬ ಮಾತುಗಳಿದ್ದ ಕಾಲ ಸರಿದು, ಜೀವಪರ ದಾನಗಳು ಪ್ರಸ್ತುತ ಮನುಷ್ಯನ ಬಾಳಿನಲ್ಲಿ ಹಾಸುಹೊಕ್ಕಾಗಿವೆ. ವೈದ್ಯಕೀಯ ವಿಜ್ಞಾನ ಬೆಳೆಯುತ್ತಿದ್ದಂತೆ ನೇತ್ರದಾನ, ದೇಹದಾನ, ಅಂಗಾಂಗ ದಾನಗಳೂ ತಮ್ಮ ಮಹತ್ವ ಹೆಚ್ಚಿಸಿಕೊಳ್ಳುತ್ತಿವೆ. 'ಜೀವ ಉಳಿಸುವುದಕ್ಕಿಂತ ದೊಡ್ಡ ದಾನ ಬೇರಿಲ್ಲ' ಎಂಬ ನಿಲುವಿಗೆ ಮನುಷ್ಯ ಇಂದು ಬಂದಿದ್ದಾನೆ. ಹೀಗಾಗಿ, ಈ ಕಾಲಘಟ್ಟದಲ್ಲಿ 'ಅಂಗಾಂಗ ದಾನವೇ ಅತಿಶ್ರೇಷ್ಠ ದಾನ' ಎಂಬ ಮಾತನ್ನು ಎಲ್ಲರೂ ಒಪ್ಪಿಕೊಳ್ಳುತ್ತಿದ್ದಾರೆ.



# ಬಾಡಿ ಹೋದ ಬಳ್ಳಿಯಿಂದ ಹೂವು ಅರಳಬಲ್ಲದು!

### ಇದುವೇ 'ಜೀವ ಸಾರ್ಥಕತೆ'!

ಕಿಡ್ನಿ ಮುಂತಾದ ಅಂಗಾಂಗಗಳ ಅಕ್ರಮ ಮಾರಾಟ ಜಾಲಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ, ಅನಾರೋಗ್ಯಪೀಡಿತರ ಬಾಳಿಗೆ ಬೆಳಕಾಗುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ 2017ರಲ್ಲಿ ಸ್ಥಾಪಿಸಿದ ಸಂಸ್ಥೆಯೇ 'ಜೀವ ಸಾರ್ಥಕತೆ'. ಭಾರತ ಸರ್ಕಾರವು ಮಾನವ ಅಂಗ ಕಸಿ ಕಾಯ್ದೆಯನ್ನು 1994ರಲ್ಲಿ ಜಾರಿಗೊಳಿಸಿತು. ಮೆದುಳಿನಲ್ಲಿ ಸ್ರಾವ ಉಂಟಾಗಿ, ಬ್ರೇನ್ ಡೆಡ್ ಆದಂಥ ವ್ಯಕ್ತಿ ತನ್ನ ಅಂಗಾಂಗಗಳನ್ನು ದಾನ ಮಾಡಲು ಈ ಕಾಯ್ದೆ ಅನುವು ಮಾಡಿಕೊಟ್ಟಿದೆ. ಎಲ್ಲ ರಾಜ್ಯಗಳಲ್ಲಿ ಅಂಗಾಂಗ ಕಸಿಯ ವ್ಯವಸ್ಥಿತ ನಿರ್ವಹಣೆಗಾಗಿ ಸೊಟ್ಟೊ (State Organ Transplant and Tissue Organization) ವನ್ನೂ ಸ್ಥಾಪಿಸಲಾಗಿದೆ. ಪ್ರಸ್ತುತ ರಾಜ್ಯದ ಆರೋಗ್ಯದ ಇಲಾಖೆ ಜೀವ ಸಾರ್ಥಕತೆಯನ್ನು 'ಕರ್ನಾಟಕದ ಸೊಟ್ಟೊ' ಆಗಿ ಗುರುತಿಸಿದೆ.

'ಜೀವ ಸಾರ್ಥಕತೆ' ಸಂಸ್ಥೆಯು ದಾನಿಯ, ಫಲಾನುಭವಿಗಳ ನಡುವೆ ಸೇತುವೆಯಂತೆ ಕೆಲಸ ಮಾಡುವುದಲ್ಲದೆ, ನೋಂದಣಿಯನ್ನೂ ನಿರ್ವಹಿಸುತ್ತದೆ. ಅಂಗಾಂಗ ದಾನವನ್ನು ಕಾನೂನು ಚೌಕಟ್ಟಿನಲ್ಲಿ ಬಿಗುಗೊಳಿಸುವ ಉದ್ದೇಶ ಈ ಸಂಸ್ಥೆಯದ್ದು. 24/7 ಸಮನ್ವಯಕಾರನಾಗಿ, ಅಗತ್ಯ ಸಲಹೆ- ಸೂಚನೆಗಳನ್ನೂ ನೀಡುತ್ತದೆ.

### ಯಾರು ದಾನಿಗಳಾಗಬಹುದು?

ಮಕ್ಕಳಿಂದ ಮದುಕರವರೆಗೆ ಬ್ರೈನ್ ಡೆಡ್ ಆದಂಥ ಯಾವುದೇ ವ್ಯಕ್ತಿಯೂ ತನ್ನ ಆರೋಗ್ಯವಂತ ಅಂಗಾಂಗಗಳನ್ನು ದಾನ ಮಾಡಲು ಕಾನೂನಾತ್ಮಕವಾಗಿ ಅವಕಾಶವಿದೆ. ಕ್ಯಾನ್ಸರ್, ಏಡ್ಸ್ ಸೋಂಕಿತರನ್ನು ಹೊರತುಪಡಿಸಿ ಅಂಗಾಂಗ ಸುವ್ಯವಸ್ಥೆಯಲ್ಲಿರುವವರು ದಾನ ಮಾಡಬಹುದು. ಕಣ್ಣು, ಯಕೃತ್, ಕಿಡ್ನಿ, ಹೃದಯ, ಚರ್ಮ, ಕರುಳು, ಶ್ವಾಸಕೋಶ, ಮೇದೋಜೀರಕ ಗ್ರಂಥಿಗಳನ್ನು ದಾನ ಮಾಡಬಹುದು.


### ಯಾರು ಪಡೆದುಕೊಳ್ಳಬಹುದು?

ದಾನಿಗಳು ದಾನ ಮಾಡಿದ ಅಂಗಾಂಗಗಳನ್ನು ಅವಶ್ಯಕತೆಗನುಗುಣವಾಗಿ 'ಕಾಯುವಿಕೆಯ ಪಟ್ಟಿ'ಯಲ್ಲಿರುವ (ವೇಟಿಂಗ್ ಲಿಸ್ಟ್) ಸಂತ್ರಸ್ತರು ಪಡೆದುಕೊಳ್ಳಬಹುದು. ಅಂಗಾಂಶಗಳ ಲಕ್ಷಣಗಳು, ರಕ್ತದ ಗುಂಪುಗಳ ಪರಿಶೀಲನೆಯನ್ನು ಈ ವೇಳೆ ಪರಿಗಣಿಸಲಾಗುತ್ತದೆ. ಪ್ರಸ್ತುತ 'ಕಾಯುವಿಕೆಯ ಪಟ್ಟಿ' ಬೆಳೆಯುತ್ತಲೇ ಇದ್ದು, ಅಂಗಾಂಗ ದಾನಿಗಳ ಸಂಖ್ಯೆ ತೀರಾ ಕಡಿಮೆ ಇದೆ. ಭಾರತದಲ್ಲಿ ಶೇ. 0.03ರಷ್ಟು ಮಾತ್ರವೇ ಅಂಗಾಂಗ ದಾನಿಗಳ ಪ್ರಮಾಣವಿದೆ.





## ಸುಳ್ ಸುದ್ದಿ ನಂಬ್ಲೇಬೇಡಿ



- ಸತ್ತ ನಂತರ ಶವಕ್ಕೆ ನೋವಿನ ಅನುಭವ ಆಗುತ್ತಂತೆ!
  **ಶುದ್ಧ ಸುಳ್ಳು**
- ಅಂಗಾಂಗ ದಾನ ಮಾಡಲು ಧಾರ್ಮಿಕ ನೀತಿ ಅಡ್ಡಿಯಾಗುತ್ತೆ.
  **ಇಲ್ಲ.**
- ದೇಹದ ಭಾಗಗಳನ್ನು ತೆಗೆದ ನಂತರ ದೇಹ ವಿರೂಪಗೊಳ್ಳುತ್ತದೆ.
  **ಸುಳ್ಳು**
- ತೀರಾ ವಯಸ್ಸಾದವರು ದೇಹದಾನ ಮಾಡಲು ಸಾಧ್ಯವಿಲ್ಲ.
  **ಸುಳ್ಳು**
- ಅಂಗಾಂಗ ದಾನಕ್ಕೆ ಸಹಿಹಾಕಿ, ನಿರ್ಧಾರ ವಾಪಸು ಪಡೆಯುವಂತಿಲ್ಲ.
  **ಸುಳ್ಳು**
- ಕಣ್ಣುದಾನ ಮಾಡಿದರೆ ಮರುಜನ್ಮದಲ್ಲಿ ಕುರುಡನಾಗಿ ಹುಟ್ಟುತ್ತಾರಂತೆ.
  **ಅಪ್ಪಟ ಸುಳ್ಳು**

ಅಂಗ ರಕ್ಷಕ

**ಕಿಡ್ನಿ**

**ಉಪ್ಪು ಸೇವನೆ ಕಡಿಮೆಗೊಳಿಸಿ, ನೀರು ಸೇವನೆ ಅಭ್ಯಾಸ ಹೆಚ್ಚಿಸಿಕೊಳ್ಳುವುದರಿಂದ ಕಿಡ್ನಿಗೆ ಹಾನಿ ಆಗುವುದು ತಪ್ಪುತ್ತದೆ.**



## ದಾನದ ವಿಧಗಳು

- ದೇಹದಾನ- ವೈದ್ಯಕೀಯ ಕಾಲೇಜುಗಳು
- ಅಂಗದಾನ- ಹೃದಯ, ಜಠರ, ಮೇದೋಜೀರಕ ಗ್ರಂಥಿ, ಶ್ವಾಸಕೋಶಗಳು, ಮೂತ್ರಪಿಂಡಗಳು, ಕರುಳು
- ಅಂಗಾಂಶ- ರಕ್ತ, ಮೆದುಳು, ಚರ್ಮ, ಮೂಳೆ, ನರಗಳು




**ಅಂಗ ರಕ್ಷಕ**

### ಹೃದಯ

ಪ್ರತಿನಿತ್ಯ ಶುಂಠಿಯ ಉಪಯೋಗದಿಂದ ಹೃದಯ ಕ್ಷೇಮವಾಗಿರುತ್ತದೆ.

## ಕ್ವಿಕ್ ವ ಕ್ವಿಕ್

**ಮೃತನಿಂದ ಹೊರತೆಗೆದ ಅಂಗಾಂಗಗಳನ್ನು ನಿರ್ದಿಷ್ಟಸಮಯದೊಳಗೆ ಸಂತ್ರಸ್ತನಿಗೆ ಕಸಿಮಾಡಬೇಕಾಗುತ್ತದೆ...**

- ಹೃದಯ 6hrs.
- ಶ್ವಾಸಕೋಶ 6hrs.
- ಕರುಳು 10hrs.
- ಲಿವರ್ 15hrs.
- ಮೇದೋಜೀರಕ 24hrs.
- ಕಿಡ್ನಿ 48hrs.

### ಬ್ರೈನ್ ಡೆತ್ ಎಂದರೆ...

ಮೆದುಳಿಗೆ ತೀವ್ರ ಹಾನಿಯಾದರೆ ಅಥವಾ ಆಂತರಿಕ ಸ್ರಾವ (ಹೆಮರೇಜ್) ಸಂಭವಿಸಿದರೆ, ವ್ಯಕ್ತಿಯ ಮೆದುಳಿನ ಎಲ್ಲ ಕ್ರಿಯೆಗಳೂ ನಿಂತುಹೋಗುತ್ತವೆ. ರಸ್ತೆ ಅಪಘಾತ, ತಲೆಗೆ ಬಲವಾದ ಹೊಡೆತ, ಪಾರ್ಶ್ವವಾಯುಗಳಿಂದಾಗಿ ಈ ರೀತಿಯ ಸ್ರಾವ ಸಂಭವಿಸಬಹುದು. ಇಂಥ ಸನ್ನಿವೇಶದಲ್ಲಿ ವ್ಯಕ್ತಿಗೆ ಬ್ರೈನ್‌ಡೆತ್ ಅಪಾಯ ಎದುರಾಗಬಹುದು.

ಮೆದುಳು ಸಾವಾಗಿರುವುದನ್ನು ಖಚಿತಪಡಿಸಿಕೊಳ್ಳಲು ವೈದ್ಯಕೀಯ ಪರಿಣತರು ಅನೇಕ ಸರಣಿ ಪರೀಕ್ಷೆಗಳನ್ನು ಕೈಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ರೋಗಿಯ ಪ್ರಮುಖ ಅಂಗಗಳನ್ನು ಪೂರಕ ವ್ಯವಸ್ಥೆಯನ್ನು ಬಳಸಿ ಕ್ರಿಯಾಶೀಲವಾಗಿರುವಂತೆ ಇರಿಸಲಾಗುತ್ತದೆ. ಇವುಗಳ ಸಂಪರ್ಕ ಕಡಿತಗೊಳಿಸುವುದು ಕುಟುಂಬದವರ ತೀರ್ಮಾನಕ್ಕೆ ಬಿಟ್ಟಂಥ ವಿಚಾರ. ಆದರೆ ರೋಗಿಯ ಕಣ್ಣುಗಳು, ಮೂತ್ರಕೋಶ, ಯಕೃತ್ತು, ಮೇದೋಜೀರಕ ಗ್ರಂಥಿ, ಹೃದಯ ಮತ್ತು ಹೃದಯದ ಕವಾಟಗಳನ್ನು ಅವುಗಳ ಅವಶ್ಯಕತೆ ಇರುವವರಿಗೆ ದಾನ ಮಾಡಲು ಕುಟುಂಬ ತೀರ್ಮಾನಿಸಬಹುದು. ಇದರಿಂದ ಮತ್ತೊಬ್ಬರ ಜೀವ ಉಳಿಸಬಹುದಾಗಿದೆ.

### ಅಂಗಾಂಗ ಬದಲಾವಣೆ ಸಾಧ್ಯ

ಪ್ರತಿ ಮನುಷ್ಯನಿಗೂ ಮೆದುಳು, ಹೃದಯ, ಮೂತ್ರಕೋಶ, ಶ್ವಾಸಕೋಶ, ಯಕೃತ್- ಇವು ಅತಿಮುಖ್ಯ ಅಂಗಗಳು. ಇವುಗಳಲ್ಲಿ ಒಂದು ವಿಫಲವಾದರೂ ಆ ವ್ಯಕ್ತಿಗೆ ಸಾವು ಎದುರಾಗುವ ಅಪಾಯ ಹೆಚ್ಚು. ಮೆದುಳನ್ನು ಹೊರತುಪಡಿಸಿ, ಬೇರೆಲ್ಲಾ ಅಂಗಾಂಗಗಳನ್ನೂ ವೈದ್ಯಕೀಯ ಶಸ್ತ್ರಚಿಕಿತ್ಸೆ ಮೂಲಕ ಬದಲಾಯಿಸಲು ಸಾಧ್ಯವಿದೆ. ಹೀಗಾಗಿ, ಈ ಭಾಗಗಳ ವೈಫಲ್ಯ ಎದುರಿಸುವ ರೋಗಿಗಳು ಅಂಗಾಂಗ ದಾನಿಗಳನ್ನು ಎದುರು ನೋಡುತ್ತಿರುತ್ತಾರೆ.

ಇವಲ್ಲದೆ, ಅಂಗಾಂಶಗಳಾದ ಕಾರ್ನಿಯಾ, ಹೃದಯ ಕವಾಟಗಳು, ಚರ್ಮ ಮತ್ತು ಎಲುಬುಗಳನ್ನೂ ದುರಸ್ತಿಗೊಳಪಡಿಸಲು ವೈದ್ಯವಿಜ್ಞಾನದಲ್ಲಿ ಅವಕಾಶಗಳಿವೆ.

### ವಯಸ್ಸಿನ ಹಂಗಿಲ್ಲ...

ಸರ್ಕಾರಿ ಮಾನದಂಡದಂತೆ 2 ವರ್ಷದಿಂದ ಹಿಡಿದು 65 ವಯಸ್ಸಿನ ವ್ಯಕ್ತಿಗಳು ಅಂಗಾಂಗ ದಾನಕ್ಕೆ ಅರ್ಹರು. ಆದರೆ, 65ಕ್ಕಿಂತ ಮೇಲ್ಪಟ್ಟವರಲ್ಲಿ ಅಂಗಾಂಗ ಸುಸ್ಥಿರವಾಗಿದ್ದರೆ, ಅವನ್ನು ದಾನಕ್ಕೆ ಪರಿಗಣಿಸಬಹುದು. ಅಂಗಾಂಗ ದಾನ ಮಾಡಲು ಯಾರಾದರೂ ಬಯಸಿದರೆ, ಅದು ಅಂತಿಮವಾಗಿ ವೈದ್ಯರ ತೀರ್ಮಾನವನ್ನು ಅವಲಂಬಿಸಿರುತ್ತದೆ.

**ಅಂಗ ರಕ್ಷಕ**

### ಕರುಳು

ಮೊಸರು, ಬಾಳೇಹಣ್ಣಿನ ನಿರಂತರ ಸೇವನೆ ಅಭ್ಯಾಸ ಕರುಳಿನ ಆರೋಗ್ಯವನ್ನು ಕಾಪಾಡುತ್ತದೆ.



**ರಾಜ್ಯದಲ್ಲಿ ಅಂಗಾಂಗ ದಾನಿಗಳ ಸಂಖ್ಯೆ ಏರಿಕೆ ಕಾಣುತ್ತಿದೆ. ಅಂಗಾಂಗ ದಾನದ ಬಗ್ಗೆ ಇನ್ನಷ್ಟು ಪ್ರಚಾರದ ಅಗತ್ಯವಿದ್ದು ಆರೋಗ್ಯ ಇಲಾಖೆ ಬಿರುಸಿನ ಹೆಜ್ಜೆ ಇಟ್ಟಿದೆ.**

**ಅನಿಲ್ ಕುಮಾರ್ ಟಿ. ಕೆ.**
ಐಎಎಸ್,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಇಲಾಖೆ

**2,20,000** ಮಂದಿ ಕೇವಲ ಕಿಡ್ನಿ ದಾನ ಬಯಸಿ, ವೇಟಿಂಗ್ ಲಿಸ್ಟ್‌ನಲ್ಲಿದ್ದಾರೆ (ದೇಶದಲ್ಲಿ).

**6,000** ಸಂತ್ರಸ್ತರಿಗೆ ಮಾತ್ರವೇ ಕಿಡ್ನಿ ಸಿಗುತ್ತಿದೆ.

**30,000** ಮಂದಿ ಯಕೃತ್ ದಾನ ಬಯಸಿ, ವೇಟಿಂಗ್ ಲಿಸ್ಟ್‌ನಲ್ಲಿದ್ದಾರೆ.

**17** ವೇಟಿಂಗ್ ಲಿಸ್ಟ್‌ನಲ್ಲಿ ರುವವರ ಪ್ರತಿನಿತ್ಯದ ಸಾವಿನ ಪ್ರಮಾಣ.

**8** ಮಂದಿಯ ಜೀವವನ್ನು ಒಬ್ಬ ಅಂಗಾಂಗ ದಾನಿ ಉಳಿಸಬಲ್ಲ.

### ವಿಕಾರ ಆಗ್ಬಿಟ್ರೆ..? ಛೇ, ಹಾಗೇನೂ ಇಲ್ಲ

ತಜ್ಞ ವೈದ್ಯರು ಮೃತನ ದೇಹದಿಂದ ಅಂಗಾಂಗಗಳನ್ನು ಅತ್ಯಂತ ಜಾಗ್ರತೆಯಿಂದ ಬೇರ್ಪಡಿಸುತ್ತಾರೆ. ವ್ಯಕ್ತಿಯ ಘನತೆ, ಗೌರವಕ್ಕೆ ಚ್ಯುತಿ ಬಾರದ ಹಾಗೆ ಸಾಮಾನ್ಯ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಈ ಪ್ರಕ್ರಿಯೆ ನಡೆಸುತ್ತಾರೆ. ಅಂಗಾಂಗಗಳನ್ನು ಬೇರ್ಪಡಿಸಿದ ನಂತರ ಸಹಜ ಸ್ಥಿತಿಯಲ್ಲಿ ಜಾಗ್ರತೆಯಿಂದ ದೇಹವನ್ನು ಮುಚ್ಚಲಾಗುತ್ತದೆ. ಬಳಿಕ ಮೃತನ ದೇಹ ವೀಕ್ಷಣೆಗೆ ಮತ್ತು ಆ ದೇಹದೊಂದಿಗೆ ಸಮಯ ಕಳೆಯಲು ಅವಕಾಶ ನೀಡಲಾಗುತ್ತದೆ. ಅಂಗಾಂಗ ದಾನಕ್ಕೆ ನೋಂದಣಿ ಮಾಡಿಕೊಂಡವರು ಯಾವುದೇ ಸಂದರ್ಭದಲ್ಲೂ ತಮ್ಮ ನಿರ್ಧಾರ ಬದಲಿಸಿಕೊಳ್ಳಲೂ ಅವಕಾಶವಿದೆ.

### ರಕ್ತದ ಗುಂಪು ಮುಖ್ಯವೇ?

ಕೆಲವು ಅಂಗಾಂಗಗಳ ಕಸಿ ವೇಳೆ ರಕ್ತದ ಗುಂಪನ್ನೂ ಪರಿಗಣಿಸಲಾಗುತ್ತದೆ. ಅಂಗಾಂಗ ಸ್ವೀಕರಿಸುವವರ ರಕ್ತದ ಗುಂಪು 'ಓ' ಆಗಿದ್ದಲ್ಲಿ ದಾನಿಯ ರಕ್ತದ ಗುಂಪು ಕೂಡ 'ಓ' ಆಗಿರಬೇಕು. ರಕ್ತದ ಗುಂಪು 'ಎಬಿ' ಆಗಿದ್ದಲ್ಲಿ, ಓ, ಎ, ಬಿ, ಎಬಿಗೆ ದಾನಿಯಾಗಬಹುದು. ಇದು ಜೀವಂತ ಮೂತ್ರಕೋಶದ ದಾನಕ್ಕೆ ಮಾತ್ರ. ಇನ್ನು ಶವದ ಅಂಗಾಂಗ ದಾನದಲ್ಲಿ ರಕ್ತದ ಗುಂಪಿನ ಹೊಂದಾಣಿಕೆಯನ್ನು ವೈದ್ಯರು ಅಷ್ಟೊಂದು ಗಂಭೀರವಾಗಿ ಪರಿಗಣಿಸುವುದಿಲ್ಲ. ಇದು ಕೇವಲ ನೈತಿಕ ವಿಷಯವಾಗಿರುತ್ತದೆ.

### ಯುವಕರು ಮನಸ್ಸು ಮಾಡಬೇಕು...

ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರ ನೇತೃತ್ವದಲ್ಲಿ ಅಂಗಾಂಗ ದಾನದ ಜಾಗೃತಿ ಎಲ್ಲೆಡೆ ಮನೆಮಾತಾಗುತ್ತಿದೆ. 'ಅಂಗಾಂಗ ದಾನದಲ್ಲಿ ಯುವಜನಾಂಗದ ಪಾತ್ರ ಬಹಳ ದೊಡ್ಡದು. ಅಂಗಾಂಗ ದಾನ ಎಂದಾಕ್ಷಣ ಮೃತ ವ್ಯಕ್ತಿಯ ದೇಹದ ಅವಯವಗಳನ್ನು ತೆಗೆದು ಕುರೂಪಗೊಳಿಸಲಾಗುತ್ತದೆ ಎಂಬ ತಪ್ಪು ಭಾವನೆ ಜನರಲ್ಲಿದೆ. ವೈದ್ಯಕೀಯ ಜ್ಞಾನ ಹೊಂದಿದ ಅಥವಾ ಆಧುನಿಕ ಕಾಲದ

ಅಂಗ ರಕ್ಷಕ



**ಲಿವರ್**

ಜೀರಿಗೆ, ಧನಿಯಾ, ಅರಿಶಿನದಂಥ ಸಂಬಾರ ಪದಾರ್ಥಗಳು ಲಿವರ್ ಆರೋಗ್ಯಕ್ಕೆ ಉತ್ತಮ.



ಅಂಗಾಂಗ ದಾನದ ಬಗ್ಗೆ ಇಲಾಖೆ ಸಾಕಷ್ಟು ಜಾಗೃತಿ ಮೂಡಿಸುತ್ತಿದೆ. ಕಳೆದವರ್ಷ 31 ಬಾರಿ 'ಗ್ರೀನ್ ಕಾರಿಡಾರ್' ಮೂಲಕ ವಿವಿಧ ಆಸ್ಪತ್ರೆಗಳಿಗೆ ಅಂಗಾಂಗಗಳನ್ನು ರವಾನಿಸಲಾಗಿದೆ.

**ಡಾ. ರಂದೀಪ**, ಐಎಎಸ್,
ಆಯುಕ್ತರು, ಆರೋಗ್ಯ ಮತ್ತು
ಕುಟುಂಬ ಕಲ್ಯಾಣ ಇಲಾಖೆ

**9** ಪ್ರತಿ ಇಷ್ಟು ನಿಮಿಷಕ್ಕೆ ವೇಟಿಂಗ್ ಲಿಸ್ಟ್‌ಗೆ ಒಬ್ಬ ಸೇರುತ್ತಿದ್ದಾನೆ.


**0.65** ಭಾರತದ ಪ್ರತಿ 10 ಲಕ್ಷ ಮಂದಿಯಲ್ಲಿ ಇಷ್ಟು ಮಂದಿ ಮಾತ್ರವೇ ಅಂಗಾಂಗ ದಾನ ಮಾಡುತ್ತಿದ್ದಾರೆ.

**1,00,000** ಸಂತ್ರಸ್ತರಲ್ಲಿ ಕೇವಲ 25 ಸಾವಿರ ಮಂದಿಗಷ್ಟೇ ಕಾರ್ನಿಯಾ ಲಭಿಸುತ್ತಿದೆ.

**2,00,000** ಮಂದಿ ರೋಗಿಗಳು ಯಕೃತ್ ಲಭ್ಯವಾಗದೇ ಪ್ರತಿವರ್ಷ ಸಾಯುತ್ತಾರೆ.

ಶಿಕ್ಷಣವನ್ನು ಪಡೆದ ಯುವಜನರು ಸಹಜವಾಗಿಯೇ ಇಂತಹ ವಿಚಾರಗಳ ಬಗ್ಗೆ ತಿಳಿದುಕೊಂಡಿ ರುತ್ತಾರೆ. ಇಂಥ ಯುವಜನರಿಂದ ಅಂಗಾಂಗ ದಾನ ಕುರಿತು ಅರಿವು ಮೂಡಿಸಬಹುದು. ಪ್ರತಿ ಕುಟುಂಬದಲ್ಲಿ ಒಬ್ಬ ಯುವಕ/ಯುವತಿ ಅಂಗಾಂಗ ದಾನದ ಬಗ್ಗೆ ಅರಿವು ಮೂಡಿಸಿದರೆ ಇದು ಬಹಳ ದೊಡ್ಡ ಜನಾಂದೋಲನವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ' ಎನ್ನುತ್ತಾರೆ, ಡಾ. ಕೆ. ಸುಧಾಕರ್. ಇಷ್ಟೇ ಅಲ್ಲದೆ, ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬಂದು ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿದರೆ ಸಮಾಜದ ಇತರರೂ ಅಂಗಾಂಗ ದಾನ ಮಾಡಲು ಸ್ಫೂರ್ತಿ ದೊರೆಯುತ್ತದೆ. ಕಾಲೇಜು ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ ಸಾಮೂಹಿಕವಾಗಿ ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿದರೆ ಹೆಚ್ಚು ಪ್ರೇರಣೆ ದೊರೆಯುತ್ತದೆ ಎನ್ನುವುದು ಆರೋಗ್ಯ ಸಚಿವರ ಆಶಯ.

## ಕಳೆದ 5 ವರ್ಷಗಳಲ್ಲಿ ಅಂಗಾಂಗ ದಾನ




ಅಂಗ ರಕ್ಷಕ

**ಕಣ್ಣು**

ಬಾದಾಮಿಯಲ್ಲಿನ ವಿಟಮಿನ್ ಎ,ಇ ಅಂಶಗಳು ಕಣ್ಣಿನ ಅಂಗಾಂಶಗಳನ್ನು ರಕ್ಷಣೆ ಮಾಡುತ್ತವೆ.

# ಅಂಗಾಂಗ ದಾನದ ಆ ಕ್ಷಣಗಳು...

- ಉಳಿಸಲು ಸಕಲ ಪ್ರಯತ್ನಗಳು ವಿಫಲವಾದರೆ, ಎಲ್ಲ ರೀತಿಯ ಪರೀಕ್ಷೆಗಳು ಮತ್ತು ದಾಖಲಾತಿಗಳ ಪರೀಕ್ಷೆಯ ನಂತರ ರೋಗಿಯ ಮೆದುಳು ಸಾವನ್ನಪ್ಪಿದೆ ಎಂದು ಘೋಷಿಸಲಾಗುತ್ತದೆ.
- ಕುಟುಂಬದಿಂದ ಒಪ್ಪಿಗೆ ಪಡೆದ ನಂತರ, ದಾನ ಮಾಡುವಿಕೆ ಮತ್ತು ಅಂಗಾಂಗಗಳ ಸಂರಕ್ಷಣೆಗಾಗಿ ಅಂಗಾಂಗ ಸಂರಕ್ಷಣಾ ಸಂಘಟನೆಗೆ (ಒಪಿಒ) ಮಾಹಿತಿ ನೀಡಲಾಗುತ್ತದೆ. ಕಾನೂನಾತ್ಮಕ ಪ್ರಾಧಿಕಾರಗಳಿಂದ ಒಪ್ಪಿಗೆ ಪಡೆದುಕೊಳ್ಳಲಾಗುತ್ತದೆ.
- ಅಂಗಾಂಗ ದಾನಿಯನ್ನು ರಾಸಾಯನಿಕ ದ್ರಾವಣಗಳಿಂದ ಸಂರಕ್ಷಿಸಿ, ಔಷಧೋಪಚಾರ ಮತ್ತು ವಿವಿಧ ರೀತಿಯ ಪ್ರಯೋಗಾಲಯ ಪರೀಕ್ಷೆಗಳು ಮತ್ತು ಕೃತಕ ಉಸಿರಾಟದಲ್ಲಿರಿಸಲಾಗುತ್ತದೆ.
- ಅಂಗಾಂಗ ಕಸಿ ಪಡೆದುಕೊಳ್ಳುವವರನ್ನು ಆದ್ಯತಾ ಪಟ್ಟಿ ಮೂಲಕ ಗುರುತಿಸಲಾಗುತ್ತದೆ.
- ಶಸ್ತ್ರಚಿಕಿತ್ಸಾ ತಂಡದ ನೆರವಿನಿಂದ ಅಂಗಾಂಗ ಮತ್ತು ಅಂಗಾಂಶಗಳನ್ನು ತೆಗೆಯಲು, ಆಸ್ಪತ್ರೆಗೆ ಸಾಗಿಸಲು ಯೋಜನೆ ರೂಪಿಸಲಾಗುತ್ತದೆ.
- ದಾನಿಯನ್ನು ಶಸ್ತ್ರಚಿಕಿತ್ಸಾ ಕೊಠಡಿಗೆ ತರಲಾಗುತ್ತದೆ.
- ವಿವಿಧ ಅಂಗಾಂಗಗಳ ಪುನಃಶ್ಚೇತನ ಕ್ರಿಯೆ ನಡೆಸಲಾಗುತ್ತದೆ.
- ಅಂಗಾಂಗಗಳನ್ನು ವಿಶೇಷ ದ್ರಾವಣ, ಶೈತ್ಯಾಗಾರಗಳಿಂದ ಸಂರಕ್ಷಿಸಲಾಗುತ್ತದೆ.
- ಬ್ರೈನ್ ಡೆತ್ ಆದ ವ್ಯಕ್ತಿಯ ಕೃತಕ ಉಸಿರಾಟದ ವ್ಯವಸ್ಥೆಯನ್ನು ತಪ್ಪಿಸಲಾಗುತ್ತದೆ.
- ದಾನಿಯ ದೇಹವನ್ನು ವೈದ್ಯಕೀಯ ನಿಯಮಕ್ಕನುಗುಣವಾಗಿ ಮುಚ್ಚಿ, ಬಿಡುಗಡೆಗೊಳಿಸಲಾಗುತ್ತದೆ.



**jeevasarthakathe**

**ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಂಡ ದಾನಿಗಳ ಮಾಹಿತಿಗಳನ್ನು ರಾಜ್ಯದ ಎಲ್ಲ ಆಸ್ಪತ್ರೆಗಳಿಗೆ ಆನ್‌ಲೈನ್ ಮೂಲಕ ರವಾನಿಸಲಾಗುತ್ತದೆ...**

ಅಂಗ ರಕ್ಷಕ

**ಮೇದೋಜೀರಕ ಗ್ರಂಥಿ**

ಹೂಕೋಸು, ಎಲೆಕೋಸು, ಟೊಮೇಟೋ ಸೇವನೆ ಮೇದೋಜೀರಕ ಗ್ರಂಥಿಯ ಕ್ಷೇಮಕ್ಕೆ ಪೂರಕ.



**ಅಂಗಾಂಗ ದಾನ ಕುರಿತು ಜೀವ ಸಾರ್ಥಕತೆ ಸಂಸ್ಥೆಯ ಸಿಬ್ಬಂದಿಯು ರಾಜ್ಯದ ವಿವಿಧೆಡೆ ಜಾಗೃತಿ ಮೂಡಿಸುತ್ತಿದ್ದಾರೆ.**

**ಸ್ಪಂದನೆ ಹೆಚ್ಚುತ್ತಿದೆ...**

'ಅಂಗಾಂಗ ದಾನಗಳು ಜಾತಿ, ಮತ, ಧರ್ಮ, ಸಂಪತ್ತು, ಸ್ಥಾನಮಾನ ಅಥವಾ ಯಾವುದೇ ಅಡ್ಡಿ ಹೊಂದಿಲ್ಲ. ಕುಟುಂಬದವರು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಸಂದರ್ಭದಲ್ಲೂ ಬೇರೆಯವರ ಜೀವ ಉಳಿಸುವ ಮಾನವೀಯ ನಿರ್ಣಯವನ್ನು ಕೈಗೊಳ್ಳುತ್ತಾರೆ. ಕೋವಿಡ್ ಸಂದರ್ಭದಲ್ಲಿ ಅಂಗಾಂಗ ದಾನದ ಚಟುವಟಿಕೆಗಳಿಗೆ ಅಡ್ಡಿ ಉಂಟಾಗಿತ್ತು. ಈಗ ಅಂಗಾಂಗ ದಾನ ಮಾಡುವವರ ಸಂಖ್ಯೆ ಕ್ರಮೇಣ ಹೆಚ್ಚುತ್ತಿದೆ. ಸರ್ಕಾರದ ಮನವಿ, ಜಾಗೃತಿ ಕಾರ್ಯಕ್ರಮಗಳಿಗೆ ಉತ್ತಮ ಸ್ಪಂದನೆ ದೊರೆಯುತ್ತಿದೆ. ಆದರೆ ಬೇಡಿಕೆಗೆ ತಕ್ಕಂತೆ ಅಂಗಾಂಗ ದಾನಗಳ ಪ್ರಮಾಣ ಹೆಚ್ಚಬೇಕು' ಎಂದು ಆಶಿಸುತ್ತಾರೆ, ಸಚಿವ ಡಾ. ಕೆ. ಸುಧಾಕರ್.

## ಕಾದಿಹರು ಈ ಅಂಗಾಂಗಕ್ಕಾಗಿ...

| | |
|---|---|
| ಹೃದಯ | 76 |
| ಹೃದಯ ಮತ್ತು ಶ್ವಾಸಕೋಶ | 22 |
| ಯಕೃತ್ | 1181 |
| ಯಕೃತ್ ಮತ್ತು ಕಿಡ್ನಿ | 28 |
| ಕಿಡ್ನಿ | 3825 |
| ಕಿಡ್ನಿ ಮತ್ತು ಮೇದೋಜೀರಕ ಗ್ರಂಥಿ | 19 |
| ಶ್ವಾಸಕೋಶ | 27 |
| ಸಣ್ಣ ಕರುಳು | 02 |

ಜೀವ ಸಾರ್ಥಕತೆಯ ಕಾರ್ಯಗಳೇನು?

– ರಾಜ್ಯದಲ್ಲಿ ಅಂಗಾಂಗ ದಾನ ಮತ್ತು ಅಂಗಾಂಗ ಕಸಿಯನ್ನು ಸಮನ್ವಯಗೊಳಿಸುತ್ತಿರುವ ಏಕೈಕ ಸಂಸ್ಥೆಯೆಂದರೆ, ಅದು ಜೀವ ಸಾರ್ಥಕತೆ.

- ರಾಜ್ಯ ಸರ್ಕಾರದಿಂದ ನಿರ್ವಹಿಸಲ್ಪಡುತ್ತಿರುವ ಸಂಸ್ಥೆ ಇದಾಗಿದ್ದು, ಶವಗಳ ಅಂಗಾಂಗ ಕಸಿ ಮತ್ತು ಅದರ ಸಮನ್ವಯಕ್ಕಾಗಿ ಸರ್ಕಾರದಿಂದ ಕೇಂದ್ರೀಕೃತವಾಗಿ ಕೆಲಸ ಮಾಡುತ್ತಿದೆ.
- ಅಂಗಾಂಗ ಕಸಿಗಾಗಿ ಕಾಯುತ್ತಿರುವವರ ಪಟ್ಟಿಯನ್ನು ನಿರ್ವಹಿಸುತ್ತದೆ.
- ಸಮರ್ಥ ದಾನಿಯ ಬಗ್ಗೆ ಮಾಹಿತಿ ಪಡೆದ ನಂತರ ಜೀವ ಸಾರ್ಥಕತೆಯು ದಾನಕ್ಕೆ ಲಭ್ಯವಾಗಿರುವ ಅಂಗಾಂಗದ ಸೂಕ್ತತೆಯನ್ನು ಅವಲೋಕಿಸುತ್ತದೆ.
- ಅಂಗಾಂಗ ಹೊಂದಾಣಿಕೆಗೆ ರಕ್ತದ ಗುಂಪು ಮತ್ತು ಇತರೆ ಮಾನದಂಡಗಳ ಆಧಾರದ ಮೇಲೆ, ಸ್ವೀಕೃತಿದಾರರನ್ನು ಆಯ್ಕೆಮಾಡಲಾಗುತ್ತದೆ.
- ಸ್ವೀಕೃತಿದಾರರನ್ನು ಆಸ್ಪತ್ರೆಗೆ ಕರೆತಂದು, ಶಸ್ತ್ರಚಿಕಿತ್ಸೆಗೆ ಅಣಿಗೊಳಿಸಲಾಗುತ್ತದೆ.
- ಶಸ್ತ್ರಚಿಕಿತ್ಸಾ ವೈದ್ಯರ ತಂಡವು ದಾನಿಯಿಂದ ಪಡೆದ ಅಂಗಾಂಗ ಸಂರಕ್ಷಣೆಯನ್ನು ನಿರ್ವಹಿಸುತ್ತದೆ.

## ಜೀವ ಸಾರ್ಥಕತೆಯ ಜಾಗೃತಿ



ಹುಬ್ಬಳ್ಳಿಯ ಹುರಕಡ್ಲಿ ಅಜ್ಜ ಮಹಿಳಾ ಕಾಲೇಜಿನಲ್ಲಿ ಜೀವ ಸಾರ್ಥಕತೆ ನಡೆಸಿದ ಜಾಗೃತಿ ಕಾರ್ಯಕ್ರಮ.



ಬೆಂಗಳೂರಿನ ಆರೋಗ್ಯ ಸೌಧದಲ್ಲಿ ಅಂಗಾಂಗ ದಾನ ಕುರಿತು ಜರುಗಿದ ಜನ ಆಂದೋಲನ ಕಾರ್ಯಕ್ರಮ.



ಮಂಗಳೂರಿನ ಜಿಲ್ಲಾ ಗೃಹರಕ್ಷಕ ದಳದ ಕಚೇರಿಯಲ್ಲಿ ನಡೆದ ಜಾಗೃತಿ ಕಾರ್ಯಕ್ರಮದ ನೋಟ...




ಮೈಸೂರಿನ ರೈಲ್ವೆ ರಕ್ಷಣಾ ದಳದ ಸಿಬ್ಬಂದಿಗೆ ಅಂಗಾಂಗ ದಾನ ಜಾಗೃತಿ ನೀಡಿದ ಸಂದರ್ಭ...

ಅಂಗ ರಕ್ಷಕ



**ಚರ್ಮ**

**ಟೊಮೇಟೊ, ಕ್ಯಾರೆಟ್, ತಾಜಾ ತರಕಾರಿಗಳ ಸೇವನೆಯಿಂದ ಚರ್ಮದ ಆರೋಗ್ಯ ವೃದ್ಧಿಸುತ್ತದೆ.**




# ಆನ್‌ಲೈನ್‌ನಲ್ಲೇ ಮಾಡಿ, ಅಂಗಾಂಗ ದಾನ

'ಜೀವ ಸಾರ್ಥಕತೆ' ಎಂಬ ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ವ್ಯಕ್ತಿ ತನ್ನ ಮರಣದ ನಂತರ ಯಾವ ಅಂಗ ದಾನ ಮಾಡುತ್ತೇನೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬಹುದಾಗಿದೆ.

ಬಹುತೇಕರಿಗೆ ಅಂಗಾಂಗ ದಾನ ಮಾಡುವ ಬಗ್ಗೆ ಉತ್ಸಾಹ ಇರುತ್ತದೆ. ಆದರೆ, ಆ ಪ್ರಕ್ರಿಯೆ ಹೇಗೆ? ಏನು? ಎತ್ತ?– ಈ ಬಗ್ಗೆ ಪ್ರಶ್ನೆಗಳಿರುತ್ತವೆ. ಇದಕ್ಕಾಗಿ ಕಚೇರಿಗಳಿಗೆ ಹೋಗಿ ಅಲೆದಾಡಬೇಕಾ ಎಂಬ ಗೊಂದಲವೂ ಜತೆಗಿರುತ್ತದೆ. ಖುಷಿಯ ಸಂಗತಿ ಏನೆಂದರೆ, ಆನ್‌ಲೈನ್‌ನಲ್ಲೇ ನಾವು ಈ ಕುರಿತು ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ.

ಆರೋಗ್ಯ ಇಲಾಖೆಯಿಂದ 'ಜೀವ ಸಾರ್ಥಕತೆ' ಎಂಬ ಹೆಸರಿನಲ್ಲಿ ವೆಬ್‌ಸೈಟ್ ಆರಂಭಿಸಲಾಗಿದೆ. ನೋಂದಣಿ ಮಾಡುವ ವ್ಯಕ್ತಿ ತನ್ನ ಮರಣದ ನಂತರ ಯಾವ ಅಂಗ ದಾನ ಮಾಡುತ್ತೇನೆ ಎಂಬುದನ್ನು ಇಲ್ಲಿ ನಮೂದಿಸಬಹುದಾಗಿದೆ.

### ಆಧಾರ್ ನೋಂದಣಿ ಕಡ್ಡಾಯ

ಸರ್ಕಾರದ ಯಾವುದೇ ಯೋಜನೆಗಳ ಲಾಭ ಪಡೆಯಲೂ ಇಂದು ಆಧಾರ್ ಸಂಖ್ಯೆಯ ನೋಂದಣಿ ಬಹಳ ಮುಖ್ಯ. ಜೀವ ಸಾರ್ಥಕತೆ ಯೋಜನೆಯಲ್ಲೂ ಅಂಗಾಂಗ ದಾನ ಮಾಡುವ ವ್ಯಕ್ತಿ ಅರ್ಜಿಯೊಂದಿಗೆ ಆಧಾರ್ ಲಿಂಕ್ ಮಾಡಿಕೊಳ್ಳುವುದು ಕಡ್ಡಾಯ. ದಾನಿಯ ಸಂಪೂರ್ಣ ಮಾಹಿತಿಯನ್ನು ನಿಖರವಾಗಿ ತಿಳಿಯಲು ಆಧಾರ್ ಸಂಖ್ಯೆ ನೆರವಾಗುತ್ತದೆ. ಅಲ್ಲದೆ, ಕರ್ನಾಟಕದಲ್ಲಿ ಎಷ್ಟು ಮಂದಿ ದಾನಿಗಳಿದ್ದಾರೆ? ಯಾವ್ಯಾವ ಅಂಗಾಂಗ ದಾನಕ್ಕೆ ಅವರು ತೀರ್ಮಾನಿಸಿದ್ದಾರೆ? ಅವರ ವಯಸ್ಸೆಷ್ಟು? ಅವರ ವಾಸವೆಲ್ಲಿ? ಯಾವ ಅಂಗಾಂಗಗಳು ಎಷ್ಟು ಲಭ್ಯ ಇವೆ ಎಂಬ ಮಾಹಿತಿಯು ಆರೋಗ್ಯ ಇಲಾಖೆಗೆ ನಿಖರವಾಗಿ ಸಿಗಲಿದೆ. ಇದನ್ನೆಲ್ಲ ಆಧರಿಸಿಯೇ, ಸದ್ಯ ಎಷ್ಟು ಮಂದಿಗೆ ಅಂಗಾಂಗ ಜೋಡಣೆ ಸಾಧ್ಯವಿದೆ ಎಂಬುದರ ಸ್ಪಷ್ಟ ಅರಿವೂ ಇಲಾಖೆಗೆ ಸಿಗುತ್ತದೆ. ಅಂಗಾಂಗ ಕಸಿ ವಿಚಾರದಲ್ಲಿ ನಡೆಯುವ ಅಕ್ರಮಗಳಿಗೆ ಈ ನೋಂದಣಿ ಕಡಿವಾಣ ಹಾಕುತ್ತದೆ.





### ದೇಹದಾನದ ನೋಂದಣಿ

ಅಂಗಾಂಗ ದಾನಗಳ ಹಾಗೆಯೇ ಮರಣಾನಂತರ ಮಾಡುವ ದೇಹದಾನ ಕೂಡ ವೈಜ್ಞಾನಿಕವಾಗಿ ಈ ದಿನಗಳಲ್ಲಿ ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿರುವ ಸಂಗತಿ. ಒಬ್ಬ ವ್ಯಕ್ತಿಯು ತನ್ನ ಮರಣದ ಅನಂತರ ತನ್ನ ದೇಹವನ್ನು ವೈದ್ಯಕೀಯ ಜ್ಞಾನಾರ್ಜನೆ ಮತ್ತು ಸಂಶೋಧನೆಗೋಸ್ಕರ ಸಮರ್ಪಿಸುವ ಇಚ್ಛೆಯನ್ನು ಮರಣಪೂರ್ವದಲ್ಲೇ ಪ್ರಕಟಗೊಳಿಸುವ ಪ್ರಕ್ರಿಯೆ ಇದಾಗಿದೆ. ಸರ್ಕಾರಿ ಆಸ್ಪತ್ರೆ ಅಥವಾ ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ನೋಂದಾಯಿಸಲ್ಪಟ್ಟ ಯಾವುದೇ ಆಸ್ಪತ್ರೆಗಳಲ್ಲಿ ದೇಹದಾನ ಸ್ವೀಕೃತಿಗಾಗಿ ನೋಂದಾಯಿಸಿಕೊಳ್ಳಲು ಅವಕಾಶವಿದೆ. ಬೆಂಗಳೂರಿನಲ್ಲಿ ಪ್ರಮುಖ ಸರ್ಕಾರಿ ಆಸ್ಪತ್ರೆಗಳಾದ ಎಂ.ಎಸ್. ರಾಮಯ್ಯ ಹಾಸ್ಪಿಟಲ್, ಸೇಂಟ್ ಜಾನ್ಸ್ ಹಾಸ್ಪಿಟಲ್, ಬೆಂಗಳೂರು ಮೆಡಿಕಲ್ ಕಾಲೇಜು ಆಸ್ಪತ್ರೆಗಳಲ್ಲಿ ದೇಹದಾನಕ್ಕೆ ಅವಕಾಶ ಕಲ್ಪಿಸಲಾಗಿದೆ.

### ಎಲ್ಲೆಡೆ ಮಾಹಿತಿ ರವಾನೆ

ಜೀವ ಸಾರ್ಥಕತೆ ವೆಬ್‌ಸೈಟ್ ಮೂಲಕ ಮಾಡಿಕೊಂಡ ನೋಂದಣಿ ಮಾಡಿಕೊಂಡ ದಾನಿಗಳ ಸಂಪೂರ್ಣ ಮಾಹಿತಿಗಳನ್ನು ರಾಜ್ಯದ ಎಲ್ಲ ಆಸ್ಪತ್ರೆಗಳಿಗೆ ಆನ್‌ಲೈನ್ ಮೂಲಕ ರವಾನಿಸಲಾಗುತ್ತದೆ. ಆ ವ್ಯಕ್ತಿ ಯಾವುದೇ ಪ್ರದೇಶದಲ್ಲಿ, ಯಾವುದೇ ಸಂದರ್ಭದಲ್ಲಿ ಮೃತಪಟ್ಟರೂ ಈ ಸ್ಥಳೀಯ ಆಸ್ಪತ್ರೆಗಳಿಗೆ ಮಾಹಿತಿ ತಲುಪಿದಾಗ, ಅಂಗಾಂಗ ದಾನದ ಮುಂದಿನ ಪ್ರಕ್ರಿಯೆಗೆ ಇದರಿಂದ ಅನುಕೂಲವಾಗುತ್ತದೆ.

### ಸರಳ ನೋಂದಣಿಗೆ ಆರೇ ಹೆಜ್ಜೆಗಳು

1 https://www.jeevasarthakathe.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಿ.

2 ಆರಂಭದಲ್ಲೇ ಕ್ಯೂಆರ್ ಕೋಡ್ ಬರುತ್ತದೆ. ಸ್ಕ್ಯಾನ್ ಮಾಡಿ.

3 ಅಲ್ಲಿನ ಸೂಕ್ತ ಜಾಗದಲ್ಲಿ ಹೆಸರು, ರಕ್ತದ ಗುಂಪು, ಜನ್ಮ ದಿನಾಂಕ, ವಿಳಾಸ, ಮೊಬೈಲ್ ಸಂಖ್ಯೆ ತುಂಬಿ.

4 ಒಟಿಪಿ ಕೇಳುತ್ತದೆ. ಒಟಿಪಿ ಟೈಪಿಸಿದ ಬಳಿಕ, ಫೋಟೋ ಅಪ್ಲೋಡ್ ಮಾಡಿ.

5 ದಾನ ಮಾಡುವ ಅಂಗಾಂಗಗಳ ಹೆಸರಿನ ಮುಂದೆ ಟಿಕ್ ಮಾರ್ಕ್ ಹಾಕಿ.

6 ನಂತರ ಸಬ್‌ಮಿಟ್ ಕ್ಲಿಕ್ಕಿಸಿದರೆ, ಜೀವ ಸಾರ್ಥಕತೆ ಡೋನರ್ ಕಾರ್ಡ್ ಸಿಗುತ್ತದೆ.

### ಗುಟ್ಟಾಗಿ ಇಡಬೇಡಿ...

ನೀವು ಅಂಗಾಂಗ ಇಲ್ಲವೇ ದೇಹದಾನಕ್ಕೆ ನೋಂದಾಯಿಸಿಕೊಂಡ ಸಂಗತಿಯನ್ನು ಆಪ್ತರೊಂದಿಗೆ ಹಂಚಿಕೊಳ್ಳಿ. ಇದನ್ನು ಗುಟ್ಟಾಗಿ ಇಡುವ ಯಾವುದೇ ಪ್ರಯತ್ನ ಬೇಡ. ಸಾವಿನ ನಂತರ ಮುಂದಿನ ಪ್ರಕ್ರಿಯೆಗಳಿಗೆ ಕುಟುಂಬದವರ ಒಪ್ಪಿಗೆ, ಸ್ಪಂದನೆ ಬಹಳ ಮುಖ್ಯವಾಗಿರುತ್ತದೆ. ಅಂತೆಯೇ, ನಿಮ್ಮ ಸ್ನೇಹಿತರು, ಕುಟುಂಬ ವರ್ಗದವರಿಗೂ ಅಂಗಾಂಗ ದಾನ ಮಾಡಲು ಪ್ರೇರೇಪಿಸಿ. ಅಂದಹಾಗೆ, ಅಂಗಾಂಗ ದಾನ ನೋಂದಣಿಗೆ ಇಬ್ಬರ ಸಾಕ್ಷಿಗಳ ಸಹಿಯೂ ಬೇಕಾಗುತ್ತದೆ. ■

# ಓ ಜೀವವೇ, ನಿಮಗಿದೋ ಧನ್ಯವಾದ


**ಜೀವನದಲ್ಲಿ ಹೆಚ್ಚು ಅಂಕ ಪಡೆಯುವುದು, ಒಳ್ಳೇ ಉದ್ಯೋಗ ಹಿಡಿದು, ಕೈ ತುಂಬಾ ಸಂಬಳ ಗಳಿಸುವುದು, ಕಾರು- ಮನೆ ಖರೀದಿಸುವುದು, ಸಂಗಾತಿಗೆ ಒಳ್ಳೆಯ ಜತೆಗಾರನಾಗುವುದು- ಹೀಗೆಲ್ಲ ಬಾಳುವುದು ದೊಡ್ಡ ಸಂಗತಿಯೇ ಅಲ್ಲ. ಮನುಷ್ಯನ ಬಾಳು ಸಾರ್ಥಕವಾಗಬೇಕಾದರೆ ಅಂಗಾಂಗ ದಾನ, ದೇಹದಾನದಂಥ ಉದಾತ್ತ ನಿಲುವುಗಳನ್ನು ಕೈಗೊಳ್ಳುವುದು ಅತ್ಯುತ್ತಮ ಆಯ್ಕೆ ಮತ್ತು ಅದೂ ಮಹತ್ತರ ಸಾಧನೆ. ನಮ್ಮ ನಡುವೆ ಹಲವರು ಇಂಥ ಸಾರ್ಥಕ ಹೆಜ್ಜೆಗಳನ್ನಿಟ್ಟು ಮಾದರಿಯಾಗಿದ್ದಾರೆ. ಇವರೀಗ ನಮ್ಮೊಂದಿಗೆ ಇಲ್ಲವಾದರೂ, ಅವರ ಅಂಗ-ಅಂಗಾಂಶಗಳು ನಮ್ಮ ಸುತ್ತಮುತ್ತಲೇ ಜೀವಂತವಾಗಿವೆ...**





## ಡಾ. ರಾಜ್ ಕುಟುಂಬದ ಸಾರ್ಥಕತೆ

ಬದುಕಿದ್ದಾಗ ಒಳ್ಳೆಯ ಮನುಷ್ಯ, ಅದ್ಭುತ ನಟ ಎಂದೆನ್ನಿಸಿಕೊಂಡು, ಸಾವಿನ ನಂತರವೂ ಸಾರ್ಥಕತೆ ಮೆರೆದ ಮೇರು ಕಲಾವಿದ ಡಾ. ರಾಜ್‌ಕುಮಾರ್. ಅಣ್ಣಾವ್ರು ತಮ್ಮ ನಿಧನದ ಬಳಿಕ ನೇತ್ರದಾನ ಮಾಡಿ, ಅಂಗಾಂಗ ದಾನದ ಕುರಿತು ಇಡೀ ಸಮಾಜದ ಕಣ್ತೆರೆಸಿದ್ದರು. ಅಣ್ಣಾವ್ರನ್ನು ಅನುಸರಿಸಿ, ಅವರ ಕುಟುಂಬ ಕೂಡ ಇದೇ ಹಾದಿಯಲ್ಲೇ ಸಾಗಿದೆ. ಇತ್ತೀಚೆಗೆ ಆಕಸ್ಮಿಕವಾಗಿ ಅಗಲಿದ ಖ್ಯಾತ ನಟ ಪುನೀತ್ ರಾಜ್‌ಕುಮಾರ್ ತಮ್ಮ ನೇತ್ರಗಳನ್ನು ದಾನ ಮಾಡಿ, ಸಂತ್ರಸ್ತರ ಬಾಳಿಗೆ ಬೆಳಕಾಗಿದ್ದರು. ರಾಜ್ ಕುಟುಂಬದ ಕುಡಿಗಳಾದ ಖ್ಯಾತ ನಟ ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಕೂಡ ತಾವು ದೇಹದಾನ ಮಾಡಲು ನಿರ್ಧರಿಸಿರುವುದಾಗಿ ಇತ್ತೀಚೆಗಷ್ಟೇ ಪ್ರಕಟಿಸಿದ್ದನ್ನೂ ಇಲ್ಲಿ ಸ್ಮರಿಸಬಹುದು.



## ಸಂಚಾರಿ ವಿಜಯ್, ಬೆಂಗಳೂರು



**ದಾನ:** 2 ಕಿಡ್ನಿ, ಕಾರ್ನಿಯಾ (ನೇತ್ರ), ಹೃದಯ ಕವಾಟ, ಲಿವರ್

ಉಳಿಸಿದ ಜೀವ **7**

ಕನ್ನಡ ಚಿತ್ರರಂಗಕ್ಕೆ ರಾಷ್ಟ್ರಪ್ರಶಸ್ತಿ ತಂದು ಕೊಟ್ಟ ಅಪ್ರತಿಮ ಕಲಾವಿದ ಸಂಚಾರಿ ವಿಜಯ್ ಬೆಂಗಳೂರಿನಲ್ಲಿ ನಡೆದ ದ್ವಿಚಕ್ರ ವಾಹನ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಅಗಲಿದ ಕಹಿ ಕ್ಷಣವನ್ನು ನಾಡು ಮರೆತಿಲ್ಲ. ಘಟನೆಯಲ್ಲಿ ಅವರ ತಲೆಗೆ ಬಲವಾದ ಪೆಟ್ಟು ಬಿದ್ದು ಮೆದುಳು ನಿಷ್ಕ್ರಿಯಗೊಂಡಿತ್ತು. ವೈದ್ಯರು ಅವರ ಸ್ಥಿತಿಯನ್ನು ಬ್ರೈನ್ ಡೆತ್ ಅಂತಲೂ ಘೋಷಿಸಿದರು. ವಿಜಯ್ ಕುಟುಂಬಸ್ಥರ ಸಮಾಜಮುಖಿ ನಿರ್ಧಾರದ ಫಲವಾಗಿ, ನಟನ ಅಂಗಾಂಗ ದಾನದ ಮೂಲಕ 7 ಸಂತ್ರಸ್ತರ ಜೀವ ಉಳಿಸಲಾಯಿತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ, 'ಜೀವ ಸಾರ್ಥಕತೆ' ತಂಡ ಅಂಗಾಂಗಗಳನ್ನು ಸಂಗ್ರಹಿಸಿ, 2 ಕಣ್ಣು, 2 ಕಿಡ್ನಿ, ಲಿವರ್ ಹಾಗೂ ಹೃದಯ ಕವಾಟವನ್ನು 7 ಜನರಿಗೆ ಕಸಿ ಮಾಡಲು ವ್ಯವಸ್ಥೆ ಕಲ್ಪಿಸಿತು. ವಿಜಯ್, ಸಾವಿನಲ್ಲೂ ಪರರ ಜೀವಕ್ಕೆ ನೆರವಾಗಿ ನೈಜ ಹೀರೋ ಅಂತನ್ನಿಸಿಕೊಂಡರು.



## ವಿಕಾಸ್, ಸಕಲೇಶಪುರ

**ದಾನ:** 2 ಕಿಡ್ನಿ, ಲಿವರ್, ಹೃದಯ ಕವಾಟಗಳು

ಉಳಿಸಿದ ಜೀವ **6**



30ರ ಹರೆಯದ ವಿಕಾಸ್, ಬ್ರೈನ್ ಹೆಮರೇಜ್ ನಿಂದಾಗಿ ಆಸ್ಪತ್ರೆ ದಾಖಲಾಗಿದ್ದರು. ಎದೆ ಎತ್ತರ ಬೆಳೆದು ನಿಂತ ಮಗನ ಮೆದುಳಿನಲ್ಲಿ ರಕ್ತಸ್ರಾವ ಅಂದಾಗ ನಿಂತಲ್ಲೇ ಭೂಮಿ ಕುಸಿಯುವ ಸ್ಥಿತಿ ಆತನ ಪೋಷಕರದ್ದಾಗಿತ್ತು. ಆಸ್ಪತ್ರೆಗೆ ದಾಖಲಾಗಿದ್ದ ಮಗನಲ್ಲಿ ಚೇತರಿಕೆ ಕಾಣದೇ ಇದ್ದಾಗ, ವಿಕಾಸನ ಕುಟುಂಬಸ್ಥರು ಆತನ ಅಂಗಾಂಗಗಳನ್ನು ದಾನ ಮಾಡಲು ನಿರ್ಧರಿಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ, 'ಜೀವ ಸಾರ್ಥಕತೆ' ತಂಡ ವಿಕಾಸ್‌ನ ಅಂಗಾಂಗಗಳನ್ನು ಪಡೆದಿತ್ತು. ವಿಕಾಸ್‌ನ ಈ ಉಪಕಾರದಿಂದಾಗಿ 6 ಜನರಿಗೆ ಹೊಸ ಜೀವನ ಕಲ್ಪಿಸಿದಂತಾಗಿದೆ.

## ಹರೀಶ್, ಗುಬ್ಬಿ

**ದಾನ:** ಕಾರ್ನಿಯಾ

**ಬೆಳಕಾಗಿದ್ದು:** ಒಬ್ಬರಿಗೆ



2016ರ ಒಂದು ಮನ ಕಲಕುವ ಘಟನೆ. ಬೆಂಗಳೂರು – ನೆಲಮಂಗಲ ರಸ್ತೆಯಲ್ಲಿ ನಡೆದ ಭೀಕರ ಅಪಘಾತದಲ್ಲಿ ತುಮಕೂರಿನ ಯುವಕ ಹರೀಶ್, ಸಾವು– ನೋವಿನ ನಡುವೆ ಹೋರಾಡುತ್ತಿದ್ದರು. ಮೈಮೇಲೆ ಲಾರಿ ಹರಿದಿದ್ದರಿಂದಾಗಿ, ಹರೀಶ್‌ನ ದೇಹ ಎರಡು ಭಾಗವಾಗಿತ್ತು. ಆತ ಅಂಗಲಾಚುತ್ತಾ ನೀರು ಕೇಳಿದರೂ, ನೆರೆದಿದ್ದವರಾರೂ ನೆರವಿಗೆ ಧಾವಿಸಿರಲಿಲ್ಲ. ಇಂಥ ಸಂದಿಗ್ಧ ಹೋರಾಟದ ವೇಳೆಯಲ್ಲೂ ಹರೀಶ್, ಮಾನವೀಯತೆ ಮೆರೆದು, 'ನನ್ನ ಅಂಗಾಂಗಗಳನ್ನು ದಾನ ಮಾಡಿ' ಎಂದು ಮನವಿ ಮಾಡಿಕೊಂಡು, ಕೊನೆಯುಸಿರೆಳೆದಿದ್ದರು. ಅಪಘಾತದಲ್ಲಿ ಆತನ ಅಂಗಾಂಗಗಳಿಗೆ ಭಾರೀ ಪೆಟ್ಟು ಬಿದ್ದಿದ್ದರಿಂದಾಗಿ, ಕಣ್ಣುಗಳನ್ನು ಮಾತ್ರವೇ ದಾನ ಪಡೆಯಲಾಗಿತ್ತು. ಇಂದು ಆತನ ಕಣ್ಣುಗಳು ಬೇರೊಂದು ಜೀವಕ್ಕೆ ಬೆಳಕಾಗಿವೆ.



## ಟಿ.ಕೆ. ಗಾನವಿ, ಎನ್.ಆರ್. ಪುರ


**ದಾನ:** ಯಕೃತ್, 2 ಕಿಡ್ನಿಗಳು, ಹೃದಯ ನಾಳಗಳು, 2 ಕಾರ್ನಿಯಾ

ಉಳಿಸಿದ ಜೀವ **3**

ಆಕೆ ವೃತ್ತಿಯಲ್ಲಿ ನರ್ಸ್. ಹಗಲು- ರಾತ್ರಿ ನಿದ್ದೆ ಬಿಟ್ಟು ರೋಗಿಗಳ ಆರೈಕೆ ನೋಡಿಕೊಳ್ಳುತ್ತಿದ್ದಳು. ಆಕೆ ಮಡಿದ ಮೇಲೂ ಸಂತ್ರಸ್ತರ ಜೀವ ಉಳಿಸಿದಳು. ಆಕೆಯ ಹೆಸರು ಗಾನವಿ. ರೋಗಿಗಳ ಸೇವೆ ಮಾಡುತ್ತಲೇ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಯಲ್ಲಿ ಕುಸಿದು ಬಿದ್ದಿದ್ದಳು. ನಾಲ್ಕು ದಿನಗಳ ಕಾಲ ಚಿಕಿತ್ಸೆ ಪಡೆದರೂ, ಆಕೆ ಚೇತರಿಸಿಕೊಳ್ಳಲೇ ಇಲ್ಲ. ಸೂಕ್ತ ಪರೀಕ್ಷೆಗಳನ್ನು ಮಾಡಿದಾಗ, ಬ್ರೈನ್ ಡೆತ್ ಆಗಿರುವ ವಿಚಾರ ದೃಢವಾಯಿತು.

**ಚೈತ್ರಾ, ಕೈವಾರ**
**ದಾನ: ಕಾರ್ನಿಯಾ, ಹೃದಯ, ಕಿಡ್ನಿಗಳು**

**ಉಳಿಸಿದ ಜೀವ**
# 4



ಹೊಸ ಬಾಳಿನ ಹೊಸ್ತಿಲಿನಲ್ಲಿ ಹಸೆಮಣೆ ಏರಬೇಕಾಗಿದ್ದ ವಧು ಮಸಣದ ಯಾತ್ರೆ ನಡೆಸಿದ ಹೃದಯವಿದ್ರಾವಕ ಸನ್ನಿವೇಶ ಅದು. ಎಂಎಸ್ಸಿ ಪದವೀಧರೆ ಚೈತ್ರಾ, ಕೋಲಾರದ ಖಾಸಗಿ ಕಾಲೇಜಿನಲ್ಲಿ ಉಪನ್ಯಾಸಕಿ. ನೂರಾರು ಕನಸುಗಳನ್ನು ಹೊತ್ತು ತನ್ನ ಮದುವೆಯ ಆರತಕ್ಷತೆ ವೇದಿಕೆಯ ಮೇಲೆ ಏರಿ ಹೂ ನಗು ಬೀರುತ್ತಿದ್ದಳು. ಅದೇನಾಯಿತೋ, ಇದ್ದಕ್ಕಿದ್ದಂತೆ ಮೂರ್ಛೆ ತಪ್ಪಿ ಕೆಳಕ್ಕೆ ಬಿದ್ದಳು. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್‌ಗೆ ಕರೆತಂದರೂ ಪ್ರಯೋಜನವಾಗಲಿಲ್ಲ. ಐದು ದಿನಗಳ ಕಾಲ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಚೈತ್ರಾ ಮತ್ತೆ ಚೇತರಿಸಿಕೊಳ್ಳಲೇ ಇಲ್ಲ. ಆಕೆಯ ಬ್ರೈನ್ ಡೆಡ್ ಆಗಿದ್ದನ್ನು ವೈದ್ಯರಿಂದ ಖಾತ್ರಿಪಡಿಸಿಕೊಂಡ ಕುಟುಂಬಕ್ಕೆ ಮತ್ತೆ ಚೈತ್ರಾ ನವ ವಧುವಿನಂತೆ ಕಾಣುವುದಿಲ್ಲ ಎಂಬ ಸತ್ಯದ ಅರಿವೂ ಆಗಿತ್ತು. ವೈದ್ಯರ ಸಲಹೆ ಮೇರೆಗೆ ಕುಟುಂಬ, ಚೈತ್ರಾಳ ಅಂಗಾಂಗಗಳನ್ನು ದಾನ ಮಾಡಿ ನಾಲ್ವರಿಗೆ ಹೊಸ ಬಾಳನ್ನು ನೀಡಿದೆ.

**ಮಾನವೀಯತೆ ಮೆರೆದ ಗಾನವಿ ಕುಟುಂಬ ಆಕೆಯ ಅಂಗಾಂಗಗಳನ್ನು ದಾನ ಮಾಡಿ ಐವರ ಬಾಳಿಗೆ ಬೆಳಕಾಗಿದೆ. ಸಾವಿನ ಹೊಸ್ತಿಲಿನಲ್ಲಿದ್ದ ಮೂವರ ಪ್ರಾಣ ಉಳಿದಿದೆ. ಗಾನವಿಯ ಯಕೃತ್ ಅನ್ನು 48 ವರ್ಷದ ವ್ಯಕ್ತಿಗೆ, ಬಲಭಾಗದ ಮೂತ್ರಪಿಂಡವನ್ನು 40 ವರ್ಷದ ವ್ಯಕ್ತಿಗೆ, ಎಡ ಭಾಗದ ಮೂತ್ರಪಿಂಡವನ್ನು 38 ವರ್ಷದ ಮಹಿಳೆಗೆ ಕಸಿ ಮಾಡಲಾಗಿದೆ. ಹೃದಯ ನಾಳಗಳನ್ನು ಮಣಿಪಾಲ್ ಆಸ್ಪತ್ರೆಗೆ, ಕಾರ್ನಿಯಾಗಳನ್ನು ಮಿಂಟೋ ಕಣ್ಣಿನ ಆಸ್ಪತ್ರೆಗೆ ನೀಡಲಾಗಿದೆ. ಗಾನವಿ ಸಾವಿನಲ್ಲೂ ತನ್ನ ಕರ್ತವ್ಯ ನಿಭಾಯಿಸಿದ್ದನ್ನು ಸಮಾಜ ಇನ್ನೂ ನೆನಪಿಸಿಕೊಳ್ಳುತ್ತಿದೆ.**

# ಅಂಗಾಂಗ ದಾನಕ್ಕೆ ಅಸ್ತು ಎಂದವರು...

- ಐಶ್ವರ್ಯಾ ರೈ, ಚಿತ್ರನಟಿ (ಕಾರ್ನಿಯಾ)
- ಅನಿಲ್ ಕುಂಬ್ಳೆ, ಕ್ರಿಕೆಟಿಗ (ಕಾರ್ನಿಯಾ)
- ಮನಮೋಹನ ಸಿಂಗ್, ರಾಜಕಾರಣಿ (ಅಂಗಾಂಗ)
- ಆಮೀರ್ ಖಾನ್, ಚಿತ್ರನಟ (ಅಂಗಾಂಗ)
- ಗೌತಮ್ ಗಂಭೀರ್, ಕ್ರಿಕೆಟಿಗ (ಅಂಗಾಂಗ)
- ಬಾಬಾ ರಾಮ್‌ದೇವ್, ಯೋಗಗುರು (ಅಂಗಾಂಗ)
- ನವಜೋತ್ ಸಿಂಗ್ ಸಿಧು, ಕ್ರಿಕೆಟಿಗ/ ರಾಜಕಾರಣಿ (ಅಂಗಾಂಗ)
- ರಜನಿಕಾಂತ್, ಚಿತ್ರನಟ (ಕಾರ್ನಿಯಾ)
- ನಂದಿತಾ ದಾಸ್, ಚಿತ್ರನಟಿ (ಅಂಗಾಂಗ)
- ವಿನೋದ್ ಕಾಂಬ್ಳಿ, ಕ್ರಿಕೆಟಿಗ (ಅಂಗಾಂಗ)
- ಶ್ರೀ ಶ್ರೀ ರವಿಶಂಕರ್, ಅಧ್ಯಾತ್ಮ ಗುರು (ಅಂಗಾಂಗ)
- ಜಯಪ್ರದಾ, ಚಿತ್ರನಟಿ (ಅಂಗಾಂಗ)
- ಸುನೀಲ್ ಶೆಟ್ಟಿ, ಚಿತ್ರನಟ (ಕಾರ್ನಿಯಾ)
- ಜೂಹಿ ಚಾವ್ಲಾ, ಚಿತ್ರನಟಿ (ಕಾರ್ನಿಯಾ)
- ಆರ್. ಮಾಧವನ್, ಚಿತ್ರನಟ (ಅಂಗಾಂಗ)
- ಜಯಾ ಬಚ್ಚನ್, ಚಿತ್ರನಟಿ (ಕಾರ್ನಿಯಾ)
- ಪ್ರಿಯಾಂಕಾ ಚೋಪ್ರಾ, ಚಿತ್ರನಟಿ (ಅಂಗಾಂಗ)

# ದೇಹದಾನ ಮಾಡಿದ ಪ್ರಮುಖರು

- ಭಾರ್ಗವಿ ನಾರಾಯಣ್, ಚಿತ್ರನಟಿ
- ಲೋಕೇಶ್, ನಟ
- ಜಿ.ಟಿ. ನಾರಾಯಣ ರಾವ್, ವಿಜ್ಞಾನ ಲೇಖಕ
- ಹಾಲ್ದೊಡ್ಡೇರಿ ಸುಧೀಂದ್ರ, ವಿಜ್ಞಾನಿ
- ರಾಜೇಶ್ವರಿ ತೇಜಸ್ವಿ, ಸಾಹಿತಿ
- ಬಿ. ಗಂಗಯ್ಯ, ಲೆಕ್ಕಾಧಿಕಾರಿ



# ಬಹುಕೋಟಿ ಕಾರನ್ನು ಹೂಳಲು ಹೊರಟಿದ್ದ ಉದ್ಯಮಿ

**ಥೇ**ನ್ ಚಿಕಿನೋ ಸ್ಕಾರ್ಪಾ ಎಂಬ ಬ್ರೆಜಿಲ್ ಉದ್ಯಮಿ ಒಮ್ಮೆ ಅಚ್ಚರಿಯ ಘೋಷಣೆ ಮಾಡಿದ್ದ. 'ನಾಳೆ ಬೆಳಗ್ಗೆ ಬಹುಕೋಟಿ ಬೆಲೆಬಾಳುವ ಬೆಂಟ್ಲಿ ಕಾರನ್ನು ನಾನು ಹೂಳುತ್ತಿದ್ದೇನೆ' ಎಂದಿದ್ದ. ಇದಾಗಿ ಕೆಲವೇ ನಿಮಿಷಗಳಲ್ಲಿ ಅವನಿಗೆ ಹಲವರಿಂದ ಮೇಲಿಂದ ಮೇಲೆ ಫೋನು. ಪುಕ್ಕಟೆ ಸಲಹೆ. 'ಮಿಲಿಯನ್ ಡಾಲರ್ ಕಾರನ್ನು ನೀವು ಹೂಳುವ ಬದಲು ಯಾವುದಾದ್ರೂ ಟ್ರಸ್ಟಿಗೆ ಕೊಡಿ', 'ಬಡವರಿಗೆ ದಾನ ಮಾಡಿ', 'ಮಣ್ಣಲ್ಲಿ ಹೂತು ಯಾಕೆ ಕಾರನ್ನು ವೇಸ್ಟ್ ಮಾಡ್ತೀರ?'– ಹೀಗೆ. ಮರುದಿನ ಬೆಳಕುಬಿಟ್ಟಿತು. ಮಣ್ಣು ತೆಗೆದ ದೊಡ್ಡ ಗುಂಡಿಯ ಮುಂದೆ, ತನ್ನ ಬೆಂಟ್ಲಿ ಕಾರಿನ ಜತೆಯಲ್ಲಿ ಉದ್ಯಮಿ ಸ್ಕಾರ್ಪಾ ನಿಂತಿದ್ದ. ನೆರೆದಿದ್ದ ಎಲ್ಲರ ಮುಂದೆ ನಕ್ಕು 'ಅಲ್ರಯ್ಯಾ... ಲಕ್ಷುರಿ ಕಾರು ಹೂಳುತ್ತೇನೆ ಎಂದಾಗ ಇಷ್ಟೆಲ್ಲ ಕಾಳಜಿ ತೋರಿದ ನೀವು, ಇದಕ್ಕಿಂತ ಬೆಲೆಬಾಳುವ ಸತ್ತ ಮನುಷ್ಯನ ಶರೀರವನ್ನೇಕೆ ಹೂಳುತ್ತೀರಿ? ಹೃದಯ, ಕಿಡ್ನಿ, ಶ್ವಾಸಕೋಶ, ಯಕೃತ್, ಕಣ್ಣಿನಂಥ ಬೆಲೆ ಕಟ್ಟಲಾಗದ ಅಂಗಾಂಗಗಳನ್ನೇಕೆ ಮಣ್ಣಿನಲ್ಲಿ ವ್ಯರ್ಥಮಾಡುತ್ತೀರಿ? ಇವುಗಳಿಂದ ಎಷ್ಟೋ ಸಂತ್ರಸ್ತರ ಅಮೂಲ್ಯ ಜೀವ ಉಳಿಸಬಹುದು ಎಂಬುದು ನಿಮಗೆ ತಿಳಿದಿಲ್ಲವೇ?' ಎಂದು ಪ್ರಶ್ನಿಸಿ, ಅವರೆಲ್ಲರ ಕಣ್ತೆರೆಸಿದ್ದ. ಅಂಗಾಂಗ ದಾನದ ಮಹತ್ವವನ್ನು ಇದಕ್ಕಿಂತ ಸೊಗಸಾಗಿ, ಸರಳವಾಗಿ ಅರ್ಥೈಸುವುದು ಅಸಾಧ್ಯ.



# ದಯವೇ ಧರ್ಮದ ಮೂಲವಯ್ಯಾ!

## ಧರ್ಮದ ಕಂಗಳಲ್ಲಿ ಅಂಗಾಂಗ ದಾನ

ಒಂದು ವಿಚಾರ ತಿಳಿದಿರಲಿ... ಯಾವುದೇ ಧರ್ಮವೂ ಅಂಗಾಂಗ ದಾನವನ್ನು ವಿರೋಧಿಸುವುದಿಲ್ಲ. ಆರುವ ಜೀವ, ಮತ್ತೊಂದು ಜೀವವನ್ನು ಬೆಳಗುತ್ತದೆ ಎಂದಾದಲ್ಲಿ ಅದನ್ನು ಯಾವ ಧರ್ಮವೂ ಕಡೆಗಣಿಸುವುದಿಲ್ಲ. ವಿವಿಧ ಧರ್ಮಗಳ ಕಣ್ಣಿನಲ್ಲಿ ಅಂಗಾಂಗ ದಾನಗಳ ಕುರಿತು ಇರುವ ಅಭಿಪ್ರಾಯಗಳನ್ನು ತೆರೆದಿಡುವುದೂ ಅಷ್ಟೇ ಮುಖ್ಯ.

ಸರ್ವ ಧರ್ಮೀಯ ಜನತೆ ನೆಲೆಕಂಡುಕೊಂಡಿರುವ ಭಾರತದಲ್ಲಿ ವ್ಯಕ್ತಿಯ ಹುಟ್ಟು- ಮರಣದ, ಈ ಆದಿ ಮತ್ತು ಅಂತ್ಯದ ಎರಡೂ ಸಂದರ್ಭಗಳಲ್ಲಿ ಧಾರ್ಮಿಕ ಆಚರಣೆಗಳು ಎಲ್ಲರಿಗೂ ಎದುರುಗೊಳ್ಳುತ್ತವೆ. ಆಯಾ ಧರ್ಮ, ನಂಬಿಕೆಗಳ ಪ್ರಕಾರವೇ ವ್ಯಕ್ತಿಯ ಹುಟ್ಟನ್ನು ಸ್ವಾಗತಿಸುವುದು, ಅಂತಿಮ ವಿಧಿ- ವಿಧಾನಗಳನ್ನೊಳಗೊಂಡ ಬೀಳ್ಕೊಡುವಿಕೆಗಳು ನಡೆಯುವುದನ್ನು ನಾವೆಲ್ಲರೂ ಗಮನಿಸಿದ್ದೇವೆ.

ಸಂಪ್ರದಾಯ, ವಿಧಿ- ವಿಧಾನಗಳ ಮೇಲೆ ಹೆಚ್ಚು ನಂಬಿಕೆ ತೋರ್ಪಡಿಸುವ ಈ ಸನ್ನಿವೇಶದಲ್ಲಿ ಮೃತನ ಕುಟುಂಬಸ್ಥರನ್ನು ಅಂಗಾಂಗ ದಾನಕ್ಕೆ ಒಪ್ಪಿಸುವುದೇ ಬಲುದೊಡ್ಡ ಸವಾಲು. ಮೃತನ ಬಗ್ಗೆ ಕುಟುಂಬಸ್ಥರು ಪ್ರಕಟಿಸುವ ಅತೀವ ಪ್ರೀತಿಯನ್ನು ಎದುರಿಸುವ ಅನಿವಾರ್ಯತೆ 'ಜೀವ ಸಾರ್ಥಕತೆ' ಕಾರ್ಯಕರ್ತರ ಮುಂದಿರುತ್ತದೆ. ಅಂಗಾಂಗ ದಾನ ಕುರಿತು ವೈಜ್ಞಾನಿಕ ಅರಿವು ಹೊಂದಿದ ಎಷ್ಟೋ ಮಂದಿ ನಮ್ಮ ಸುತ್ತಮುತ್ತ ಇರುತ್ತಾರಾದರೂ, ಮರಣದ ಸನ್ನಿವೇಶದಲ್ಲಿ ಮುನ್ನೆಲೆಗೆ ಬರುವ ವಿಚಾರಗಳೇ ಬೇರೆ.

ಮುಖ್ಯವಾಗಿ ನಮ್ಮ ಧರ್ಮ, ಜಾತಿ ಇದಕ್ಕೆಲ್ಲ ಆಸ್ಪದ ಕೊಡುವುದಿಲ್ಲ ಎಂದೇ ಹಲವರು ತರ್ಕಿಸುವುದು ಸಹಜ. ಎಲ್ಲ ಧರ್ಮತತ್ತ್ವಗಳೂ ಅಂತಿಮವಾಗಿ ಪ್ರತಿಪಾದಿಸುವುದು, ಮಾನವೀಯ ಪ್ರೀತಿಯನ್ನೇ ಎನ್ನುವ ಸತ್ಯದ ಜಾಗೃತಿ ಮೂಡುವುದು ಇಂದು ಅನಿವಾರ್ಯ. ಒಂದು ವಿಚಾರ ತಿಳಿದಿರಲಿ... ಯಾವುದೇ ಧರ್ಮವೂ ಅಂಗಾಂಗ ದಾನವನ್ನು ವಿರೋಧಿಸುವುದಿಲ್ಲ. ಆರುವ ಜೀವ, ಮತ್ತೊಂದು ಜೀವವನ್ನು ಬೆಳಗುತ್ತದೆ ಎಂದಾದಲ್ಲಿ ಅದನ್ನು ಯಾವ ಧರ್ಮವೂ ಕಡೆಗಣಿಸುವುದಿಲ್ಲ.

ವಿವಿಧ ಧರ್ಮಗಳ ಕಣ್ಣಿನಲ್ಲಿ ಅಂಗಾಂಗ ದಾನಗಳ ಕುರಿತು ಇರುವ ಅಭಿಪ್ರಾಯಗಳನ್ನು ತೆರೆದಿಡುವುದೂ ಅಷ್ಟೇ ಮುಖ್ಯ.



## 1 ಹಿಂದೂ ಧರ್ಮ

ಹಿಂದೂಗಳು ತಮ್ಮ ಅಂಗಗಳನ್ನು ದಾನ ಮಾಡಬಹುದು. ಧರ್ಮದಲ್ಲಿ ಇದಕ್ಕೆ ಯಾವುದೇ ವಿರೋಧಗಳಿಲ್ಲ. ಅಂಗಾಂಗ ದಾನವನ್ನು ಧರ್ಮ ಗೌರವಿಸುತ್ತದೆ. ಅದು ಅವರ ವೈಯಕ್ತಿಕ ವಿಷಯ ಎಂಬ ಸ್ವಾತಂತ್ರ್ಯವನ್ನೂ ನೀಡುತ್ತದೆ. ಇಲ್ಲಿ ಯಾವುದೇ ಧಾರ್ಮಿಕ ಕಾನೂನುಗಳು ಅಡ್ಡಿಬರುವುದಿಲ್ಲ. ಹಲವು ಗುರುಗಳು, ಆಧ್ಯಾತ್ಮ ಪ್ರತಿಪಾದಕರು ಕೂಡ ಅಂಗಾಂಗ ದಾನಕ್ಕೆ ಒಪ್ಪಿಗೆ ನೀಡಿರುವುದೇ ಇದಕ್ಕೆ ಸಾಕ್ಷಿ.

## 2 ಇಸ್ಲಾಂ ಧರ್ಮ

ಇಸ್ಲಾಂನ ಅನುಯಾಯಿಗಳನ್ನೊಳಗೊಂಡ ಮುಸ್ಲಿಂ ಧಾರ್ಮಿಕ ಪರಿಷತ್ತು ಆರಂಭದಲ್ಲಿ, 1983ರಲ್ಲಿ ಅಂಗದಾನ ಪ್ರಕ್ರಿಯೆಯನ್ನು ತಿರಸ್ಕರಿಸಿತ್ತು. ಆ ನಂತರದಲ್ಲಿ ದಾನಿಗಳ ಒಪ್ಪಿಗೆ ಪಡೆದು, ದಾನ ಮಾಡಬಹುದು ಎಂದು ಪುನಃ ತನ್ನ ನಿಲುವಿನಲ್ಲಿ ಬದಲಾವಣೆ ಮಾಡಿಕೊಂಡಿತು. 'ಯಾರಾದರೂ ಸಂಕಷ್ಟದಲ್ಲಿರುವ ವ್ಯಕ್ತಿ ನೆರವನ್ನು ಬಯಸಿದರೆ, ಅದನ್ನು ಪೂರೈಸುವುದು ಆದ್ಯ ಕರ್ತವ್ಯ' ಎನ್ನುವ ಜೀವತತ್ವವನ್ನು ಇಸ್ಲಾಂ ಆರಂಭದಿಂದಲೂ ಪ್ರತಿಪಾದಿಸಿಕೊಂಡೇ ಬಂದಿರುವುದನ್ನು ಗಮನಿಸಬಹುದು.

## 3 ಕ್ರೈಸ್ತ ಧರ್ಮ

ಕ್ರೈಸ್ತ ಧರ್ಮವು ಅಂಗಾಂಗ ದಾನವನ್ನು ಮಾನವೀಯ ದೃಷ್ಟಿಕೋನದಲ್ಲಿ ನೋಡುತ್ತದೆ. ಅಂಗಾಂಗ ದಾನದ ಒಪ್ಪಿಗೆಯು ಸೇವೆ, ಸೋದರ ಪ್ರೀತಿ ಹಾಗೂ ತ್ಯಾಗದ ಪ್ರತೀಕ ಎಂದೇ ವ್ಯಾಖ್ಯಾನಿಸುತ್ತದೆ. 'ದೇವರ ಮಹಿಮೆಯಿಂದಲೇ ಮನುಷ್ಯನ ಜನ್ಮವಾಗಿದೆ. ಭಗವಂತನ ಪ್ರೀತಿಯನ್ನು ಎಲ್ಲರಿಗೂ ಹಂಚುವುದೂ ಒಂದು ಸಾರ್ಥಕತೆ' ಎಂದೇ ಈ ಧರ್ಮ ಉದಾತ್ತವಾಗಿ ನಂಬುತ್ತದೆ.

## 4 ಬೌದ್ಧ ಧರ್ಮ

ಶಾಂತಿ, ನೆಮ್ಮದಿಯನ್ನು ಪ್ರತಿಪಾದಿಸುವ ಬೌದ್ಧ ಧರ್ಮದಲ್ಲಿ ಅಂಗಾಂಗ ದಾನಕ್ಕೆ ಯಾವುದೇ ಅಡೆತಡೆಗಳಿಲ್ಲ. ಅಂಗಾಂಗ ದಾನ ಮಾಡುವವರನ್ನು ಗೌರವಿಸುವ ಮೂಲಕ ವೈದ್ಯಕೀಯ ವಿಜ್ಞಾನದ ಪ್ರಗತಿಗೆ ಈ ಧರ್ಮ ಜತೆಯಾಗಿ ನಿಂತಿದೆ. ಅಂಗಾಂಗ ದಾನವನ್ನು ವ್ಯಕ್ತಿಗತ ಪ್ರಜ್ಞೆ ಅಂತಲೇ ಬೌದ್ಧ ಧರ್ಮ ನೋಡುತ್ತದೆ.

## 5 ಜುದಾಯಿಸಂ

'ಎಲ್ಲ ಮಾನವರೂ ದೇವರು ಬರೆದ ಚಿತ್ರದಲ್ಲಿ ದಾಖಲಾದವರು. ಯಾರ ದೇಹ ಸಾವಿನೊಂದಿಗೆ ಹೋರಾಡುತ್ತಿದೆಯೋ, ಅಂಥವರ ಜೀವ ಉಳಿಸಿ, ಅವರ ಕೈಹಿಡಿಯುವುದೇ ಮನುಷ್ಯ ಧರ್ಮ' ಎನ್ನುವುದನ್ನು ಯಹೂದಿಗಳು ಪ್ರತಿಪಾದಿಸುತ್ತಾರೆ. ಅದರಲ್ಲೂ ಮರಣಾನಂತರ ನೇತ್ರದಾನ ಮಾಡುವ ಬಗ್ಗೆ ಈ ಧರ್ಮೀಯರು ಹೆಚ್ಚು ಒಲವು ಹೊಂದಿರುವುದನ್ನು ಗಮನಿಸಬಹುದು. ■

**ವೈದ್ಯಕೀಯ ಸಿಬ್ಬಂದಿ, ಬ್ರೈನ್ ಡೆತ್ ಆದ ರೋಗಿಯ ಸಂಬಂಧಿಗಳಲ್ಲಿ ಅರಿವು ಮೂಡಿಸಬೇಕು. ರೋಗಿಯ ಚಿಂತಾಜನಕ ಸ್ಥಿತಿಯ ಬಗ್ಗೆ ತಿಳಿಸಿ, ಅಂಗಾಂಗ ದಾನ ಮಾಡಿಸಲು ಪ್ರೇರೇಪಿಸಬೇಕು.**

**ಡಾ. ಎಂ. ಕಿರಣ್ ಕುಮಾರ್**
ಜಂಟಿ ನಿರ್ದೇಶಕರು, ವೈದ್ಯಕೀಯ ವಿಭಾಗ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

# ಮುಕ್ತ ರಸ್ತೆಗೆ ಪೊಲೀಸ್ ಇಲಾಖೆ ಶ್ರಮ ಅಪಾರ

ಗ್ರೀನ್ ಕಾರಿಡಾರ್‌ಗೆ ಪೊಲೀಸರ ಪಾತ್ರ ಸ್ತುತ್ಯರ್ಹ ಅಂಗಾಂಗ ರವಾನೆಯಲ್ಲಿ ಆಸ್ಪತ್ರೆ ಸಿಬ್ಬಂದಿ ಮಾತ್ರವಲ್ಲ, ಪೊಲೀಸರ ಪಾತ್ರ ಕೂಡ ಬಹಳ ಮುಖ್ಯವಾಗಿದೆ. ಬ್ರೈನ್ ಡೆತ್‌ನ ಬಳಿಕ ಹೊರತೆಗೆದ ಅಂಗಾಂಗಗಳನ್ನು ಅನ್ಯರೋಗಿಗೆ ಕಸಿ ಮಾಡಲು ಇಂತಿಷ್ಟೇ ಸಮಯ ನಿಗದಿಯಾಗಿರುತ್ತದೆ. ಅಂಗಾಂಗಗಳನ್ನು ಆ ಸಮಯದೊಳಗೇ ನಿಗದಿತ ಸ್ಥಳಕ್ಕೆ ತಲುಪಿಸಬೇಕಾಗುತ್ತದೆ. ಹೀಗಾಗಿ, ಯಾವುದೇ ಅಂಗಾಂಗ ರವಾನೆಗೂ



ಪೊಲೀಸ್ ಇಲಾಖೆಯಿಂದ ಗ್ರೀನ್ ಕಾರಿಡಾರ್ ವ್ಯವಸ್ಥೆ ಮಾಡಲಾಗುತ್ತದೆ. 'ಅಂಗಾಂಗ ಸಾಗಾಟವನ್ನು ಎಷ್ಟು ಸಮಯದೊಳಗೆ ಆಸ್ಪತ್ರೆಗೆ ತಲುಪಿಸಬೇಕು ಎಂಬುದನ್ನು ಆಸ್ಪತ್ರೆ ಸಿಬ್ಬಂದಿ ತಿಳಿಸುತ್ತಾರೆ. ಅಂಗಾಂಗ ಹೊತ್ತ ಆ್ಯಂಬುಲೆನ್ಸ್ ಸಂಚರಿಸುವ ಮಾರ್ಗದಲ್ಲಿ ಸಂಚಾರ ಮುಕ್ತ ಅಥವಾ ಸಿಗ್ನಲ್ ಫ್ರೀ ವ್ಯವಸ್ಥೆ ಮಾಡಲಾಗುತ್ತದೆ. ಅತಿ ತುರ್ತು ಸಂದರ್ಭದಲ್ಲಿ ಆ್ಯಂಬುಲೆನ್ಸ್‌ನ ಮುಂಭಾಗ ಪೊಲೀಸ್ ವಾಹನವೊಂದು ಎಸ್ಕಾರ್ಟ್ ರೀತಿ ಸಂಚರಿಸುತ್ತದೆ' ಎಂದು ವಿವರಿಸುತ್ತಾರೆ, ಪೊಲೀಸರು. 'ರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ರಾಜ್ಯಪಾಲರು, ಮುಖ್ಯಮಂತ್ರಿ ಹಾಗೂ ಇತರೆ ಅಗ್ರಗಣ್ಯರು ಸಂಚರಿಸುವಾಗ ಮಾತ್ರ ಸಂಚಾರ ಮುಕ್ತ ರಸ್ತೆ ವ್ಯವಸ್ಥೆಗೆ ಅವಕಾಶವಿದೆ. ಅಂಗಾಂಗ ರವಾನೆ ವೇಳೆ ಮಾನವೀಯ ನೆಲೆಗಟ್ಟಿನಲ್ಲಿ ಗ್ರೀನ್ ಕಾರಿಡಾರ್ ವ್ಯವಸ್ಥೆ ಮಾಡಲಾಗುತ್ತದೆ' ಎನ್ನುತ್ತಾರೆ, ನಗರ ಪೊಲೀಸ್ ಆಯುಕ್ತ ಕಮಲ್ ಪಂತ್.

# ಅಂಗಾಂಗ ದಾನ ಭಾರತಕ್ಕೆ 3ನೇ ಸ್ಥಾನ

ಅಂಗಾಂಗಗಳ ದಾನದಲ್ಲಿ ಅಮೆರಿಕ ಹಾಗೂ ಚೀನಾ ದೇಶಗಳ ಬಳಿಕ, ಭಾರತ 3ನೇ ಸ್ಥಾನದಲ್ಲಿದೆ. 2012-13ನೇ ಸಾಲಿಗೆ ಹೋಲಿಸಿದರೆ, ಅಂಗಾಂಗ ದಾನದ ಪ್ರಮಾಣವು ನಾಲ್ಕು ಪಟ್ಟು ಹೆಚ್ಚಾಗಿದೆ. ದೇಶದಲ್ಲಿ ವಾರ್ಷಿಕ ಅಂಗಾಂಗ ದಾನಗಳ ಸಂಖ್ಯೆ 2013ರಲ್ಲಿ 4,990 ಆಗಿದ್ದು, 2019ರಲ್ಲಿ 12,746ಕ್ಕೆ ಏರಿದೆ.

ಅಂಗ ರಕ್ಷಕ

**ಶ್ವಾಸಕೋಶ**

ಕ್ಯಾನ್ಸರ್ ವಿರೋಧಿ ಅಂಶ ಅಧಿಕವುಳ್ಳ ಬೆಳ್ಳುಳ್ಳಿಯ ಸೇವನೆ ಶ್ವಾಸಕೋಶದ ಆರೋಗ್ಯವನ್ನೂ ಕಾಪಾಡುತ್ತದೆ.



# ಅಂಗಾಂಗ ದಾನವೇ ಪರಮಶ್ರೇಷ್ಠ

ಅಂಗಾಂಗ ದಾನ ಕುರಿತು ಜನಜಾಗೃತಿ ಮೂಡಿಸುವಲ್ಲಿ ಆರೋಗ್ಯ ಇಲಾಖೆಯ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿವೆ. ಈ ಸಫಲತೆಯ ಹಿಂದಿರುವ ರೂವಾರಿ, ಆರೋಗ್ಯ ಸಚಿವ **ಡಾ. ಕೆ. ಸುಧಾಕರ್.** 'ಜೀವ ಸಾರ್ಥಕತೆ'ಯ ಪ್ರತಿ ಹೆಜ್ಜೆಗಳ ಹಿಂದೆ ಇವರ ಪ್ರೋತ್ಸಾಹ ಎದ್ದು ತೋರುವಂಥದ್ದು. 'ಮರಣದ ಬಳಿಕವೂ ವ್ಯಕ್ತಿ ಸಮಾಜಕ್ಕೆ ಒಳಿತಾಗುವ ಸೇವೆ ಮಾಡಬಹುದು. ಇದಕ್ಕಾಗಿ ಇರುವ ಮಾರ್ಗವೇ ಅಂಗಾಂಗ ದಾನ' ಎನ್ನುತ್ತಾರೆ ಆರೋಗ್ಯ ಸಚಿವರು...

## ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅಂತರಂಗ



**ಅಂಗಾಂಗ ದಾನದ ಮಹತ್ವ ಹಾಗೂ ಅದರ ಅಗತ್ಯದ ಬಗ್ಗೆ ಜನಸಮುದಾಯಕ್ಕೆ ನಿಮ್ಮ ಸಂದೇಶವೇನು?**

ಭಾರತೀಯ ಪರಂಪರೆಯಲ್ಲಿ ಸೇವೆ, ದಾನ, ತ್ಯಾಗ, ಸಮರ್ಪಣೆಗೆ ವಿಶೇಷ ಸ್ಥಾನವಿದೆ. ಸಾವಿರಾರು ವರ್ಷಗಳಿಂದ ಬೆಳೆದು ಬಂದ ಪರಂಪರೆಯಲ್ಲಿ ಮೌಲ್ಯಾದರ್ಶಗಳೇ ಪ್ರಮುಖವಾದವು. ಅಂಗಾಂಗ ದಾನ ಕೂಡ ಹೊಸ ಬಗೆಯ ಮೌಲ್ಯಾದರ್ಶಗಳಿಗೆ ಸೇರುತ್ತದೆ ಎಂದರೆ ತಪ್ಪಿಲ್ಲ.

'ಸತ್ಯ ಹಾಗೂ ಪ್ರಾಮಾಣಿಕತೆಯಿಂದ ದುಡಿದ ಹಣದ ಒಂದು ಭಾಗವನ್ನು ದಾನ ಮಾಡಬೇಕು. ಇದು ಹಣದ ಬದಲು ಶಿಕ್ಷಣ, ಆಹಾರ ಅಥವಾ ಇನ್ಯಾವುದೇ ರೂಪದಲ್ಲೂ ಇರಬಹುದು' ಎಂದು ಭಾರತದ ಖ್ಯಾತ ಅರ್ಥಶಾಸ್ತ್ರಜ್ಞ ಚಾಣಕ್ಯ ಹೇಳಿದ್ದಾರೆ. ದಾನ ಎನ್ನುವುದು ಆರ್ಥಿಕ ಚಟುವಟಿಕೆಯ ಭಾಗ ಅಥವಾ ಜೀವನದ ಭಾಗ. ಈ ರೀತಿಯ ಚಿಂತನೆಯನ್ನು ನಮ್ಮ ದೇಶದಲ್ಲಿ ಮಾತ್ರ ಕಾಣಬಹುದು. ಹಣ, ಶಿಕ್ಷಣ ಮಾಡಲು ಸಹಾಯ, ಮನೆ ನಿರ್ಮಿಸಿಕೊಡುವುದು ಮೊದಲಾದ ದಾನಗಳನ್ನು ಜನರು ಮಾಡುತ್ತಾರೆ. ಅದೇ ರೀತಿ ಅನೇಕರು ರಕ್ತದಾನವನ್ನು ಕೂಡ ಮಾಡುತ್ತಾರೆ. ಇಂಥ ದಾನಗಳ ನಡುವೆ ಅತಿ ಶ್ರೇಷ್ಠವಾದ ದಾನವೇ ಅಂಗಾಂಗ ದಾನ.

ವೈದ್ಯಕೀಯ ಲೋಕದ ಆಧುನಿಕ ತಂತ್ರಜ್ಞಾನಗಳಿಂದಾಗಿ ಅಂಗಾಂಗ ದಾನ ಹೊಸತು ಎಂದೆನಿಸುತ್ತದೆ. ಅದರಲ್ಲೂ ಭಾರತದಲ್ಲಿ ಮೃತಪಟ್ಟ ವ್ಯಕ್ತಿಯ ಅಂತ್ಯಸಂಸ್ಕಾರ ಮಾಡುವ ಬದಲು ಅಂಗಾಂಗ ದಾನ ಮಾಡಬೇಕು ಎಂದರೆ ಅದಕ್ಕಾಗಿ ಕುಟುಂಬದವರನ್ನು ಮಾನಸಿಕವಾಗಿ ಸಜ್ಜುಗೊಳಿಸಬೇಕಾಗುತ್ತದೆ. ಅಂಗಾಂಗ ದಾನ ಮತ್ತೊಬ್ಬರಿಗೆ ಉಸಿರು ನೀಡುವ, ಮರುಜನ್ಮ ನೀಡುವ ಸೇವೆ ಎಂಬುದನ್ನು ಮನದಟ್ಟು ಮಾಡಬೇಕಾದ ತುರ್ತು ಅಗತ್ಯವಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕೂಡ ದೇಶದ ಜನತೆಯನ್ನುದ್ದೇಶಿಸಿ ಮಾತನಾಡುವ 'ಮನ್ ಕೀ ಬಾತ್'ನಲ್ಲಿ ಈ ಕುರಿತು ಹೇಳಿದ್ದರು. 'ಮೂತ್ರಪಿಂಡ, ಹೃದಯ ಹಾಗೂ ಲಿವರ್ ಕಸಿಗೆ ಬೇಡಿಕೆ ಹೆಚ್ಚಿದ್ದರೂ, ದಾನಕ್ಕೆ ಸಿಗುವ ಅಂಗಾಂಗಗಳು ಬಹಳ ಕಡಿಮೆ ಪ್ರಮಾಣದಲ್ಲಿವೆ.

ಹೀಗಾಗಿ ಅಂಗಾಂಗ ದಾನ ಬಹಳ ಮುಖ್ಯ' ಎಂದು ಹೇಳಿದ್ದರು. ಇದೇ ರೀತಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೂಡ ಅಂಗಾಂಗ ದಾನ ಮಾಡಲು ಕೋರಿದ್ದಾರೆ. ಅಲ್ಲದೆ, ಕಳೆದ ಆಗಸ್ಟ್‌ನಲ್ಲೇ ಅವರು ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸುವ ಪ್ರತಿಜ್ಞೆ ಮಾಡಿದ್ದಾರೆ. ಇವೆಲ್ಲವೂ ಜನರಿಗೆ ಬಹಳ ಪ್ರೇರೇಪಣೆ ನೀಡಿದೆ.



ಅಂಗಾಂಗ ದಾನದ ಅವಶ್ಯಕತೆಯನ್ನು ಅರಿತು ಮೃತದೇಹವನ್ನು ಮಣ್ಣಿನಲ್ಲಿ ಹೂಳುವ ಅಥವಾ ಸುಡುವ ಬದಲು ಬೇರೆಯವರ ಬದುಕಿಗಾಗಿ ದಾನ ಮಾಡಲು ಮುಂದಾಗಬೇಕು. ಮೆದುಳು ನಿಷ್ಕ್ರಿಯಗೊಂಡ ವ್ಯಕ್ತಿಯು ಅಂಗಾಂಗ ದಾನ ಮಾಡುವುದಾದರೆ, ಕಾರ್ನಿಯಾ, ಹೃದಯ, ಹೃದಯ ಕವಾಟ, ಯಕೃತ್, ಮೂತ್ರಪಿಂಡ, ಚರ್ಮ, ಅಸ್ಥಿಮಜ್ಜೆ, ಶ್ವಾಸಕೋಶ, ಕರುಳು ಸೇರಿದಂತೆ 25ಕ್ಕೂ ಅಧಿಕ ಅಂಗಾಂಗಗಳನ್ನು ತೆಗೆದು ಬೇರೆಯವರಿಗೆ ಕಸಿ ಮಾಡಬಹುದು. ಅಂದರೆ, ಒಬ್ಬ ವ್ಯಕ್ತಿ 8 ಜನರಿಗೆ ಮರುಜೀವ ನೀಡಬಹುದು.

## ರಾಜ್ಯದಲ್ಲಿ ಅಂಗಾಂಗ ದಾನ ಕುರಿತು ಯಾವ ರೀತಿಯ ಜಾಗೃತಿ ಕಾರ್ಯಕ್ರಮ ಕೈಗೊಳ್ಳಲಾಗಿದೆ?

ಅಂಗಾಂಗ ದಾನದ ಕುರಿತು ಜಾಗೃತಿ ಮೂಡಿಸುವುದು ಒಂದು ಭಾಗವಾದರೆ, ಮೃತ ವ್ಯಕ್ತಿಯ ಕುಟುಂಬದವರ ಮನ ಒಲಿಸುವುದು ಮತ್ತೊಂದು ಭಾಗ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಈ ಬಗ್ಗೆ ನಿರಂತರವಾಗಿ ಜಾಗೃತಿ ಮೂಡಿಸಲಾಗುತ್ತಿದೆ. ರೇಡಿಯೊ, ಪತ್ರಿಕೆ, ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಪ್ರಚಾರ ಮಾಡಲಾಗುತ್ತಿದೆ. ಶಾಲೆ, ಕಾಲೇಜುಗಳಲ್ಲಿ, ವಿವಿಧ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ಕಚೇರಿಗಳಲ್ಲಿ, ಸಭೆ, ಸಮಾರಂಭಗಳಲ್ಲಿ ಅಂಗಾಂಗ ದಾನದ ಮಹತ್ವದ ಬಗ್ಗೆ ಜನರಿಗೆ ತಿಳಿಸಲಾಗುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತಿಪತ್ರಗಳನ್ನು ಹಂಚುವುದು, ಸರ್ಕಾರಿ ಬಸ್‌ಗಳಲ್ಲಿ ಅಂಗಾಂಗ ದಾನದ ಜಾಗೃತಿ ಪತ್ರಗಳನ್ನು ಅಂಟಿಸುವುದು ಮೊದಲಾದ ಹೊರಾಂಗಣ ಜಾಹೀರಾತುಗಳಿಂದ ಅರಿವು ಮೂಡಿಸುವ ಕೆಲಸವಾಗುತ್ತಿದೆ.

ಇನ್ನು ಅನೇಕ ಸಂದರ್ಭಗಳಲ್ಲಿ, ವ್ಯಕ್ತಿಯ ಮೆದುಳು ನಿಷ್ಕ್ರಿಯವಾಗಿದೆ ಎಂದು ವೈದ್ಯರು ಘೋಷಿಸಿದಾಗ ಕುಟುಂಬದವರ ಮನ ಒಲಿಸಲು ವೈದ್ಯರು, ತಜ್ಞರು ಪ್ರಯತ್ನ ಮಾಡುತ್ತಾರೆ. ಇದು ಬಹಳ ಸೂಕ್ಷ್ಮವಾಗಿ ಅರಿವು ಮೂಡಿಸುವ ಕಾರ್ಯ. ವ್ಯಕ್ತಿ ಸತ್ತಾಗ ಆತ/ ಆಕೆಯನ್ನು ಪ್ರೀತಿಸುವ ಕುಟುಂಬದವರು ಅಪಾರ ನೋವಿನಲ್ಲಿ ಮುಳುಗಿರುತ್ತಾರೆ. ಅಂಥ ಸಂದಿಗ್ಧತೆಯಲ್ಲೂ ನಮ್ಮ ವೈದ್ಯರು ಕುಟುಂಬ ಸದಸ್ಯರಿಗೆ ಅರಿವು ನೀಡಿ ಅಂಗಾಂಗ ದಾನಕ್ಕೆ ಒಪ್ಪಿಗೆ ನೀಡುವಂತೆ ಕೋರುತ್ತಿದ್ದಾರೆ. ಇದು ಬಹಳ ಪರಿಣಾಮಕಾರಿಯಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ.

ಇನ್ನು ಕೆಲವು ಸಂದರ್ಭಗಳಲ್ಲಿ ಖ್ಯಾತ ವ್ಯಕ್ತಿಗಳು ಮಾಡುವ ಅಂಗಾಂಗ ದಾನದಿಂದ ಸಮಾಜದಲ್ಲಿ ಜಾಗೃತಿ ಮೂಡುತ್ತಿದೆ. ಕನ್ನಡದ ವರನಟ ಡಾ. ರಾಜ್ ಕುಮಾರ್ ಅವರು ಮೃತರಾದಾಗ ನೇತ್ರದಾನ ಮಾಡಲಾಗಿತ್ತು. ಇದು ರಾಜ್ಯದಲ್ಲಿ ನೇತ್ರದಾನ ಮಹತ್ವವನ್ನು ಪರಿಣಾಮಕಾರಿಯಾಗಿ ಸಾರಿದೆ. ಇತ್ತೀಚೆಗೆ ನಟ ಪುನೀತ್ ರಾಜ್ ಕುಮಾರ್ ಅವರು ಮೃತರಾದಾಗ ನೇತ್ರದಾನ ಮಾಡಲಾಗಿತ್ತು. ಖ್ಯಾತ ವ್ಯಕ್ತಿಗಳ ಇಂಥ ಉದಾರ ಕಾರ್ಯಗಳು ಸಮಾಜದಲ್ಲಿ ದೊಡ್ಡ ಬದಲಾವಣೆ ತರಲು ಕಾರಣವಾಗುತ್ತವೆ.

> ಮೃತ ವ್ಯಕ್ತಿಯ ಕುಟುಂಬದವರ ಮನ ಒಲಿಸಿದರೆ ಹಾಗೂ ಜಾಗೃತಿ ಮೂಡಿಸಿದರೆ ಅಂಗಾಂಗ ದಾನ ಖಂಡಿತ ಸಾಧ್ಯ ಎಂಬುದು ಈಗಾಗಲೇ ಹಲವು ಘಟನೆಗಳಿಂದ ಸ್ಪಷ್ಟವಾಗಿದೆ.

## ಅಂಗಾಂಗ ದಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಇರುವ ಸೌಲಭ್ಯ ಹಾಗೂ ಆರೋಗ್ಯ ಇಲಾಖೆಯ ವಿಶೇಷ ಪ್ರಯತ್ನಗಳೇನು?

ಅಂಗಾಂಗ ದಾನಕ್ಕಾಗಿ ಸರ್ಕಾರ ಅನೇಕ ಮಾದರಿ ಕ್ರಮಗಳನ್ನು ವಹಿಸಿದೆ. ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವ ರೋಗಿಗಳಿಗೆ ರಾಜ್ಯ ಸರ್ಕಾರವು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಾರ್ಯಕ್ರಮದಡಿ, 'ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ' ಯೋಜನೆಯಡಿ ಅಂಗಾಂಗ ಕಸಿಗೆ ಬಿಪಿಎಲ್ ಚೀಟಿ ಹೊಂದಿರುವ ಫಲಾನುಭವಿಗೆ ಸೌಲಭ್ಯ ಕಲ್ಪಿಸಲಾಗಿದೆ. ಒಬ್ಬ ಫಲಾನುಭವಿಗೆ ವರ್ಷಕ್ಕೆ ಕಿಡ್ನಿ ಕಸಿಗೆ 2 ಲಕ್ಷ ರೂ., ಹೃದಯ ಕಸಿಗೆ 10 ಲಕ್ಷ ರೂ., ಲಿವರ್ ಕಸಿಗೆ 11 ಲಕ್ಷ ರೂ. ನೀಡಲಾಗುತ್ತಿದೆ. ಜೊತೆಗೆ ಪ್ರತಿ ಫಲಾನುಭವಿಗೆ ಇಮ್ಯುನೋಸಪ್ರೆಶನ್ ಮೆಡಿಕೇಶನ್‌ಗೆ 1 ಲಕ್ಷ ರೂ. ನೀಡಲಾಗುತ್ತದೆ.

ಅಂಗಾಂಗ ದಾನ ಹಾಗೂ ಇದಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನಿರ್ವಹಣೆ ಮಾಡಲು ಆರೋಗ್ಯ ಇಲಾಖೆಯಡಿ 'ಜೀವಸಾರ್ಥಕತೆ' ಎಂಬ ವಿಭಾಗ ಆರಂಭಿಸಲಾಗಿದೆ. ಆದರೆ, ಈ ಬಗ್ಗೆ ಹೆಚ್ಚು ಜನರಿಗೆ ಇನ್ನೂ ತಿಳಿದಿಲ್ಲ. ಈ ವಿಭಾಗದ https://www.jeevasarthakathe.karnataka.gov.in/Website/Home.aspx ನಲ್ಲಿ ಆನ್‌ಲೈನ್ ಅರ್ಜಿ ಭರ್ತಿ ಮಾಡಿ ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿಕೊಳ್ಳಬಹುದು. ಅಥವಾ ಬೆಂಗಳೂರಿನ ಆರೋಗ್ಯ ಸೌಧದಲ್ಲಿರುವ ಜೀವಸಾರ್ಥಕತೆ ಕಚೇರಿಯಲ್ಲಿ ನೋಂದಾಯಿಸಬಹುದು. ಅಂಗಾಂಗ ದಾನಕ್ಕೆ ಯಾವುದೇ ವಯೋಮಿತಿ ಇಲ್ಲ. ಸಾವಿನ ಸಮಯದಲ್ಲಿ ವೈದ್ಯಕೀಯ ಇತಿಹಾಸವನ್ನು ನೋಡಿ, ಅಂಗಗಳ ಕಾರ್ಯಕ್ಷಮತೆ ಪರಿಗಣಿಸಿ ಪಡೆಯಲಾಗುತ್ತದೆ.

ಅಂಗಾಂಗ ದಾನಕ್ಕೆ ಅನುಕೂಲವಾಗುವಂತೆ ಎಲ್ಲಾ ವೈದ್ಯಕೀಯ ವಿಶ್ವವಿದ್ಯಾಲಯ ಹಾಗೂ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಮಾನವ ಅಂಗಾಂಗ ಕೇಂದ್ರ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ■

